ಮಹಾನಗರಕ್ಕೆ ಕುಡಿಯುವ ನೀರನ್ನು ಪೂರೈಕೆಯಿಂದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗುವುದರ ಜೊತೆಗೆ ಆ ಭಾಗದ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸಿಕೊಡುವುದಕ್ಕಾಗಿ ಉಪಯುಕ್ತವಾಗಿರತಕ್ಕಂಥ ಕಳಸಾ ಬಂಡೂರಿ ನಾಲೆ ಯೋಜನೆ ಬಗ್ಗೆ ಏನು ತಡೆಯಾಜ್ಞೆ ಇದೆ. ಅದನ್ನು ತೆರವುಗೊಳಿಸುವುದ ಕ್ಕೋಸ್ಕರ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಆ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದು ಆಗ್ರಹಪಡಿಸುವುದಕ್ಕಾಗಿ ಈ ಒಂದು ಗಮನ ಸೆಳೆಯುವ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಇದಕ್ಕೆ ಸರ್ಕಾರ ದಯವಿಟ್ಟು ಉತ್ತರ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಈಗ ಬರುತ್ತಾರೆ. ಆದ್ದರಿಂದ, ಅವರು ಬಂದ ಮೇಲೆ ಇದನ್ನು ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್: ಈ ಗಮನ ಸೆಳೆಯುವ ಸೂಚನೆಯನ್ನು ನಾನು ಮತ್ತು ಮಾನ್ಯ ಸಿ.ಸಿ.ಪಾಟೀಲ್‌ರವರು ಸೇರಿಸಿ ಕೊಟ್ಟಿದ್ದೇವೆ.

ಅಧ್ಯಕ್ಷರು: ನೀರಾವರಿ ಸಚಿವರು ಇಲ್ಲ. ಅವರು ಬಂದನಂತರ ಇದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಆಯಿತು.

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೆ, ತಾವು ಕೇಷಿಪ್ ಮೂಲಕ ಸಿ.ಆರ್.ಎಫ್. ಯೋಜನೆ ಬಗ್ಗೆ ಕೇಳಿದ್ದೀರಿ. ಇದನ್ನು ಗಮನ ಸೆಳೆಯುವ ಸೂಚನೆಗೆ ಕನ್ವರ್ಟ್ ಮಾಡೋಣ. ತಾವು ಇದರ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ ವಿಶ್ವಬ್ಯಾಂಕ್ ಅಡಿಯಲ್ಲಿ ಕೇಷಿಪ್ ಮೂಲಕ ಸಿ.ಆರ್.ಎಫ್. ಯೋಜನೆಯಡಿಯಲ್ಲಿ ಹಾಗೂ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಸರಿಸುತ್ತಿರುವ ಮಾನದಂಡ ಹಾಗೂ ಈ ಬಗ್ಗೆ ಅನೇಕ ಲೋಪದೋಷಗಳು ಕಂಡು ಬಂದಿರತಕ್ಕಂಥದ್ದರ ಬಗ್ಗೆ ನಾನು ಮತ್ತು ಮಾನ್ಯ ಸಿ.ಟಿ.ರವಿ, ಮಾನ್ಯ ವಿ. ಸುನೀಲ್ ಕುಮಾರ್ ಹಾಗೂ ಮಾನ್ಯ ಬಿ. ನಾಗರಾಜ್ ಶೆಟ್ಟಿ, ನಾವೆಲ್ಲರೂ ಸೇರಿ ಈ ವಿಷಯದ ಬಗ್ಗೆ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಗಮನ ಸೆಳೆಯುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಹೇಳಿಕೆಯನ್ನು ಇದರೊಂದಿಗೆ ಲಗತ್ತಿಸಲಾಗಿದೆ

ವಿಧಾನಸಭೆಯ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಸದಸ್ಯರುಗಳಾದ ಶ್ರೀ ಸಿ.ಟಿ.ರವಿ, ಶ್ರೀ ವಿ. ಸುನೀಲ್ ಕುಮಾರ್, ಶ್ರೀ ಬಿ. ನಾಗರಾಜಶೆಟ್ಟಿ ಹಾಗೂ ಇತರರು, ರಾಜ್ಯದಲ್ಲಿ ವಿಶ್ವ ಬ್ಯಾಂಕ್ ಅಡಿಯಲ್ಲಿ ಕೆಷಿಪ್ ಮೂಲಕ ಸಿಆರ್ ಎಫ್ ಯೋಜನೆಯಡಿಯಲ್ಲಿ ಹಾಗೂ ಕೆ.ಆರ್.ಡಿ.ಸಿ.ಎಲ್. ವತಿಯಿಂದ ಕಾಮಗಾರಿ ಕೈಗೆತ್ತಿಕೊಳ್ಳಲು ಅನುಸರಿಸುತ್ತಿರುವ ಮಾನದಂಡದ ಬಗ್ಗೆ ನಿಯಮ 73ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಲೋಕೋಪಯೋಗಿ ಮತ್ತು ಇಂಧನ ಸಚಿವರ ಹೇಳಿಕೆ

ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವಶದಲ್ಲಿರುವ ರಸ್ತೆಗಳ ವಿವರ ಈ ಕೆಳಕಂಡಂತಿದೆ:

ರಾಷ್ಟ್ರೀಯ ಹೆದ್ದಾರಿ	3,973 ಕಿ.ಮೀ
ರಾಜ್ಯ ಹೆದ್ದಾರಿ	17,252ಕಿ.ಮೀ
ಪ್ರಮುಖ ಜಿಲ್ಲಾಮುಖ್ಯ ರಸ್ತೆಗಳು	30,647 ಕಿ.ಮೀ
ಒಟ್ಟು:	**51,872 ಕಿ.ಮೀಗಳು**

ಈ ರಸ್ತೆಗಳ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಮುಖ್ಯವಾಗಿ ಕೆ.ಆರ್.ಡಿ.ಸಿ.ಎಲ್. ಕೇಶಿಪ್, ಕೇಂದ್ರ ರಸ್ತೆ ನಿಧಿ, ಅಲ್ಲದೇ, ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ನಿಧಿ ಅಡಿಯಲ್ಲಿ ರಾಜ್ಯದಲ್ಲಿ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಲೋಕೋಪಯೋಗಿ ಇಲಾಖೆಯ ವಶದಲ್ಲಿ ಇರತಕ್ಕಂಥ ರಸ್ತೆಗಳನ್ನು ಮೇಲ್ದರ್ಜೆಗೇರಿಸಲು, ಪುನಶ್ಚೇತನಗೊಳಿಸಲು ಹಲವಾರು ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಮತ್ತು ಲೋಕೋಪಯೋಗಿ ಇಲಾಖೆಗೆ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನವನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಲ್ಲದೇ, ಈ ದಿಸೆಯಲ್ಲಿ ಒದಗಬಹುದಾದ ಬಾಹ್ಯ ನೆರವನ್ನೂ ಸಹ ಉಪಯೋಗಿಸಿಕೊಳ್ಳಲಾಗುತ್ತಿದೆ. ವಿವರಗಳನ್ನು ಈ

ಕೆಳಗೆ ನೀಡಲಾಗಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆ.ಆರ್.ಡಿ.ಸಿ.ಎಲ್.)ವನ್ನು ಜುಲೈ 1999ರಲ್ಲಿ ಸೇತುವೆ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ–ನಿರ್ವಹಣೆ ಮಾಡುವ ಸಲುವಾಗಿ ಕಂಪೆನಿ ಕಾಯ್ದೆಯಡಿ ಸ್ಥಾಪಿಸಲಾಯಿತು. ನಿಗಮವು ಸರ್ಕಾರೇತರ ಸಂಸ್ಥೆಗಳಿಂದ ಹಣವನ್ನು ಸಾಲ ರೂಪದಲ್ಲಿ ಸಂಗ್ರಹಿಸಿ ರಸ್ತೆ ಕಾಮಗಾರಿಗಳಿಗೆ ಉಪಯೋಗಿಸುತ್ತದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆ.ಆರ್.ಡಿ.ಸಿ.ಎಲ್)ವು ಕರ್ನಾಟಕ ಸರ್ಕಾರದ ಖಾತರಿಯೊಂದಿಗೆ ಹುಡ್ಕೊ ಸಂಸ್ಥೆಯಿಂದ ಸಾಲವನ್ನು ಪಡೆದು ಮತ್ತು ಸರ್ಕಾರದ ಆರ್ಥಿಕ ಅನುದಾನ(Budgetory Support)ದೊಂದಿಗೆ ಕರ್ನಾಟಕ ರಾಜ್ಯದಲ್ಲಿ, ರಾಜ್ಯ ಹೆದ್ದಾರಿಗಳ ನಿರ್ವಹಣೆ, ಕೆಲವೊಂದು ರಾಜ್ಯ ಹೆದ್ದಾರಿಗಳನ್ನು ಅಗಲೀಕರಿಸಿ ಬಲಪಡಿಸುವ ಮತ್ತು ರಾಜ್ಯದಾದ್ಯಂತ ಸೇತುವೆಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದೆ.

ನಿಗಮದ ವತಿಯಿಂದ ಯೋಜನೆಗಳನ್ನು ತೆಗೆದುಕೊಳ್ಳುವಾಗ ಅನುಸರಿಸುವ ಮಾನದಂಡಗಳು ಈ ಕೆಳಗಿನಂತಿವೆ.

1) ವಾಹನಗಳ ಸಾಂದ್ರತೆ

2) ಮುಖ್ಯ ಸ್ಥಳಗಳಿಗೆ ಸಂಪರ್ಕ

3) ಐತಿಹಾಸಿಕ ಸ್ಥಳಗಳಿಗೆ ಸಂಪರ್ಕ

4) ಕೈಗಾರಿಕಾ ಸ್ಥಳಗಳಿಗೆ ಸಾಮಗ್ರಿಗಳ ಸಾಗಾಣಿಕೆಗೆ ಅನುಕೂಲವಾಗುವ ರೀತಿಯಲ್ಲಿ

5) ಪ್ರಮುಖ ಧಾರ್ಮಿಕ ಸ್ಥಳಗಳಿಗೆ ಸಂಪರ್ಕ

6) ಗಣಿಗಾರಿಕೆ ಉತ್ಪನ್ನಗಳ ಸಾಗಾಟ

7) ಅಂತರ ರಾಜ್ಯಗಳಿಗೆ ಸಂಪರ್ಕ

8) ಯೋಜಿತ ಕಾಮಗಾರಿಗಳನ್ನು ಸರ್ಕಾರದ ಆದೇಶ ಮತ್ತು ಅನುದಾನದ ಖಾತರಿ ದೊರೆತನಂತರ ಕೆ.ಆರ್.ಡಿ.ಸಿ.ಎಲ್.ನ ನಿರ್ದೇಶಕರ ಮಂಡಳಿಯ ಅನುಮೋದನೆಯೊಂದಿಗೆ ತೆಗೆದುಕೊಳ್ಳಲಾಗುವುದು.

ಕೆ.ಆರ್.ಡಿ.ಸಿ.ಎಲ್. ವತಿಯಿಂದ ತೆಗೆದುಕೊಳ್ಳಲಾದ ವಿವಿಧ ಯೋಜನೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ವಿಶ್ವ ಬ್ಯಾಂಕ್ ನೆರವಿನ ಅಡಿಯಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ(KSHIP) ಯೋಜನೆಯಲ್ಲಿ ಸುಮಾರು 2381 ಕಿ.ಮೀ. ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯ ಒಟ್ಟು ಅಂದಾಜು ಮೊತ್ತ ರೂ. 2,030 ಕೋಟಿಗಳು.

ವಿಶ್ವಬ್ಯಾಂಕ್‌ನ ಮಾರ್ಗಸೂಚಿಯನ್ವಯ, ರಸ್ತೆಗಳ ಸೂಕ್ತ ಆಯ್ಕೆಗಾಗಿ ಅಂತರ ರಾಷ್ಟ್ರೀಯ ಮಟ್ಟದ ಸಲಹೆಗಾರರನ್ನು ಅಭಿವೃದ್ಧಿಪಡಿಸಲಿರುವ ರಸ್ತೆಗಳನ್ನು ಗುರುತಿಸಲು ನಿಯೋಜಿಸಿ, ಅವರ ಅಧ್ಯಯನದ ಮೇಲೆ ರಸ್ತೆಗಳನ್ನು ಗುರುತಿಸಲಾಗಿದೆ. ಈ ರಸ್ತೆಗಳನ್ನು ಗುರುತಿಸಲು ಈ ಕೆಳಗಿನ ಕಾರ್ಯಸಾಧ್ಯ ಅಧ್ಯಯನ (feasibility study)ಗಳನ್ನು ಮಾಡಲಾಗುತ್ತದೆ:

1) ಪ್ರಸ್ತುತ ವಾಹನ ಸಾಂದ್ರತೆ (Traffic) ಹಾಗೂ ರಸ್ತೆಗಳ ವಿನ್ಯಾಸಿತ ಸಾಂದ್ರತೆ

2) ಮಾರ್ಗ ಪ್ರಭಾವ ಕ್ಷೇತ್ರದಲ್ಲಿ ಆಗುವ ಅಭಿವೃದ್ಧಿ ಹಾಗೂ ಇದರಿಂದ ಹೆಚ್ಚಾಗುವ ವಾಹನ ಸಾಂದ್ರತೆ

3) ಪರಿಸರ ಪರಿಣಾಮ ಸಮೀಕ್ಷೆ

4) ಸಾಮಾಜಿಕ ಧಕ್ಕೆ ಸಮೀಕ್ಷೆ

5) ಯೋಜನೆಯಲ್ಲಿ ಅಭಿವೃದ್ಧಿಗೆ ಕೈಗೆತ್ತಿಕೊಳ್ಳುವ ರಸ್ತೆಗಳಿಂದ ಮುಂದೆ ದೊರೆಯಬಹುದಾದ ಆರ್ಥಿಕ ಲಾಭದ ಸಮೀಕ್ಷೆ, ಸರಕು ಸಾಗಾಣಿಕೆಯಲ್ಲಿ ಹಾಗೂ ರಸ್ತೆಯ ಫಲಾನುಭವಿಗಳಿಗೆ ಆಗುವ ಆರ್ಥಿಕ ಹಾಗೂ ಸಮಯದ ಉಳಿತಾಯದ ಸಮೀಕ್ಷೆ ಇತ್ಯಾದಿ.

ಮೇಲಿನ ಎಲ್ಲಾ ಸಮೀಕ್ಷೆಗಳನ್ನು ಪರಿಗಣಿಸಿ ರಸ್ತೆಗಳ ಮೌಲ್ಯಮಾಪನ ಮಾಡಿ, ಆದ್ಯತೆ ಮೇರೆಗೆ ರಸ್ತೆಗಳನ್ನು ಗುರುತಿಸಿ ವಿಶ್ವಬ್ಯಾಂಕ್‌ನಿಂದ ಈ ರಸ್ತೆಗಳ ಅಭಿವೃದ್ಧಿಯ ಅಂಗೀಕಾರ ಪಡೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅಭಿವೃದ್ಧಿ ಪಡಿಸಲು ಆಯ್ಕೆ ಮಾಡಲಾದ ರಸ್ತೆಗಳನ್ನು ಸುಮಾರು 45 ಪ್ಯಾಕೇಜ್‌ಗಳಲ್ಲಿ ವಿಂಗಡಿಸಿ ವಿಶ್ವಬ್ಯಾಂಕ್ ವಿಧಿವಿಧಾನಗಳಂತೆ ಗುತ್ತಿಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿಗಳನ್ನು

ಕೈಗೆತ್ತಿಕೊಳ್ಳಲಾಗಿದೆ. ಈ 45 ಕಾಮಗಾರಿಗಳ ಪಟ್ಟಿಯನ್ನು ಅನುಬಂಧ – 2ರಲ್ಲಿ ವಿವರಿಸಲಾಗಿದೆ.

ಕೇಂದ್ರ ರಸ್ತೆ ನಿಧಿ

ಆಯಾ ರಾಜ್ಯಗಳಲ್ಲಿ ಮಾರಾಟವಾಗುವ ಇಂಧನ ಮೇಲೆ ಪ್ರತಿ ಲೀಟರಿಗೆ 1/– ರೂ.ನಂತೆ ವಿಧಿಸಲಾಗುವ ಸುಂಕದಿಂದ ಕೇಂದ್ರ ರಸ್ತೆ ನಿಧಿಯನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯಕ್ಕೆ ವಾರ್ಷಿಕ ಸುಮಾರು 55–00 ರಿಂದ 57–00 ಕೋಟಿ ರೂ. ಶೇಖರಣೆಯಾಗುತ್ತದೆ. ರಾಜ್ಯದಲ್ಲಿ ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : RW/NH - 28030/40/ 2000-OR. New Delhi, ದಿನಾಂಕ 13.10.2000 ರಲ್ಲಿ ಸೂಚಿಸಿರುವ ಮಾರ್ಗಸೂಚಿಯಂತೆ ಕೈಗೊಳ್ಳಲಾಗುತ್ತಿದೆ. ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಪ್ರಮುಖವಾಗಿ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

(1) ರಾಜ್ಯ ಹೆದ್ದಾರಿಗಳ ಅಭಿವೃದ್ಧಿ

(2) ಅಧಿಕ ಸಂಚಾರವಿರುವ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ

(3) ಬಿಟ್ಟು ಹೋಗಿರುವ ಸೇತುವೆಗಳ ನಿರ್ಮಾಣ

(4) ದುರ್ಬಲ ಸೇತುವೆಗಳ ಸಬಲೀಕರಣ

(5) ರಸ್ತೆಗಳನ್ನು 2 ಮತ್ತು 4 ಪಥಗಳಿಗೆ ವಿಸ್ತರಿಸುವುದು

(6) ದುರ್ಬಲ ರಸ್ತೆಗಳನ್ನು ಸಬಲಗೊಳಿಸುವುದು

ಇವುಗಳಲ್ಲದೆ, ರಸ್ತೆಯ ಮೇಲ್ಮೈಯನ್ನು ವಾಹನ ಸಂಚಾರಕ್ಕೆ ಸುಗಮಗೊಳಿಸುವುದು (Improvement to riding quality) ರಸ್ತೆಯ ಸುರಕ್ಷತಾ ಕೆಲಸಗಳು, ಸಂಶೋಧನೆ ಮತ್ತು ಅಭಿವೃದ್ಧಿ (R & D) ಹಾಗೂ ಇಂಜೀನಿಯರುಗಳಿಗೆ ತರಬೇತಿ ನೀಡುವುದಕ್ಕೆ ಕೇಂದ್ರ ರಸ್ತೆ ನಿಧಿಯನ್ನು ವಿನಿಯೋಗಿಸಲಾಗುವುದು.

ಯೋಜನೆ ಮತ್ತು ಅಂದಾಜನ್ನು ಸಿದ್ಧಪಡಿಸುವ ಮತ್ತು ಸಲ್ಲಿಸುವ ರೀತಿಯನ್ನು ಕೇಂದ್ರ ಸರ್ಕಾರದವರು ನೀಡಿದ್ದು ಅದರಂತೆ ಅಂದಾಜುಗಳನ್ನು ಸಲ್ಲಿಸಲಾಗಿದೆ. ಇಲ್ಲದೇ, ಅಂದಾಜುಗಳನ್ನು ರಾಜ್ಯದ ಜನಪ್ರತಿನಿಧಿಗಳಿಂದ ಸ್ವೀಕರಿಸಿದ ಪ್ರಸ್ತಾವನೆಗಳನ್ನು ಕ್ರೋಡೀಕರಿಸಿ ಮೇಲೆ ತಿಳಿಸಿರುವ ಮಾರ್ಗಸೂಚಿ ಪ್ರಕಾರ ಸಲ್ಲಿಸಲಾಗುತ್ತಿದೆ.

ಅಂತಿಮವಾಗಿ ಕೆಲಸಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡುತ್ತಾರೆ. ರಾಜ್ಯಕ್ಕೆ ಕೇಂದ್ರ ರಸ್ತೆ ನಿಧಿಯಡಿಯಲ್ಲಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ.

ಜಿಲ್ಲಾವಾರು ಕಾಮಗಾರಿಗಳ ವಿವರಗಳನ್ನು ಅನುಬಂಧ – 3ರಲ್ಲಿ ನೀಡಲಾಗಿದೆ.

ಅನುಬಂಧ – 1

ಕೆ.ಆರ್.ಡಿ.ಸಿ.ಎಲ್. ವತಿಯಿಂದ ತೆಗೆದುಕೊಳ್ಳಲಾದ ವಿವಿಧ ಯೋಜನೆಗಳ ವಿವರ:

ಕ್ರ.ಸಂ	ಯೋಜನೆಯ ವಿವರ	ಕಿ.ಮೀ	ವೆಚ್ಚ (ಕೋಟಿ ರೂ. ಗಳಲ್ಲಿ)	ಪ್ಯಾಕೇಜು
1.	ರಸ್ತೆಯ ಅಗಲೀಕರಣ ಮತ್ತು ಬಲಪಡಿಸುವ ಕಾಮಗಾರಿಗಳು			
01.	ಜೇವರ್ಗಿ–ಬಿಜಾಪುರ ರಸ್ತೆ	119	116	4
02.	ಬಿಳಿಕೆರೆ–ಬೇಲೂರು ರಸ್ತೆ	119	109	4
03.	ಬೆಂಗಳೂರು–ಮೈಸೂರು 4 ಪಥದ ರಸ್ತೆ ನಿರ್ಮಾಣ	111	330	2
04.	ಗುಲ್ಬರ್ಗಾ ನಗರಕ್ಕೆ ವರ್ತುಲ ರಸ್ತೆ ನಿರ್ಮಾಣ	26	60	3 ಹಂತ
05.	ಮೈಸೂರು–ಬಂಟ್ವಾಳ ರಸ್ತೆ	220	266	3
06.	ವಾಡಿ–ರಾಯಚೂರು ರಸ್ತೆ	88	58	2
07.	ಗದಗ–ರೋಣ–ಬಾದಾಮಿ ರಸ್ತೆ	72.60	58	2

ಕ್ರ.ಸಂ	ಯೋಜನೆಯ ವಿವರ	ಕಿ.ಮೀ	ವೆಚ್ಚ (ಕೋಟಿ ರೂ. ಗಳಲ್ಲಿ)	ಪ್ಯಾಕೇಜು
08.	ಮಂಡ್ಯ ನಗರದಲ್ಲಿನ ಹಳೇ ಎಂ.ಸಿ.ರಸ್ತೆ ಅಭಿವೃದ್ಧಿ	7.50	4	ಕಾಮಗಾರಿ ಮುಕ್ತಾಯ ಗೊಂಡಿದೆ.
09.	ಸದಲ–ದತ್ತವಾಡ ರಸ್ತೆಯ ದೂಧಗಂಗಾ ಸೇತುವೆಯ ಕೂಡು ರಸ್ತೆ ನಿರ್ಮಾಣ	6	1	ಕಾಮಗಾರಿ ಮುಕ್ತಾಯ ಗೊಂಡಿದೆ.
10.	ಕಡೂರು–ಬಂಟ್ವಾಳ ರಾಜ್ಯ ಹೆದ್ದಾರಿ ಮತ್ತು ಸುಬ್ರಮಣ್ಯ–ಧರ್ಮಸ್ಥಳ–ಉಡುಪಿ ರಸ್ತೆ ಅಭಿವೃದ್ಧಿ	49.34	2.37	ಕಾಮಗಾರಿ ಮುಕ್ತಾಯ ಗೊಂಡಿದೆ
11.	ತಮಿಳುನಾಡು ಮತ್ತು ಆಂಧ್ರ ಪ್ರದೇಶ (ಗಡಿ ರಸ್ತೆ) ರಾಜ್ಯ ಹೆದ್ದಾರಿ ಅಭಿವೃದ್ಧಿ	31	5.80	
12.	ವಾಘ್ದಾರಿ–ರಿಬ್ಬನ್ ಪಳ್ಳಿ ರಾಜ್ಯ ಹೆದ್ದಾರಿ ಅಭಿವೃದ್ಧಿ	6	2.44	ಕಾಮಗಾರಿ ಮುಕ್ತಾಯ ಗೊಂಡಿದೆ
13.	ಸಿಂಧಗಿ–ಶಹಾಪುರ ರಸ್ತೆ ಅಭಿವೃದ್ಧಿ	5	1.83	

ಕ್ರ.ಸಂ	ಯೋಜನೆಯ ವಿವರ	ಕಿ.ಮೀ	ವೆಚ್ಚ (ಕೋಟಿ ರೂ. ಗಳಲ್ಲಿ)	ಪ್ಯಾಕೇಜು
2. ರಾಜ್ಯ ಹೆದ್ದಾರಿ ನಿರ್ವಹಣೆ:				
01.	ರಾಜ್ಯ ಹೆದ್ದಾರಿ ಮೂರು ವರ್ಷ ನಿರ್ವಹಣೆ 2001–2004	7337	225	26 ಲೋಕೋಪಯೋಗಿ ವಿಭಾಗಗಳಲ್ಲಿ ನಿರ್ವಹಣೆ ಕಾಮಗಾರಿಗಳು ಮುಕ್ತಾಯಗೊಂಡಿವೆ. (ಕಾರವಾರ ಪ್ಯಾಕೇಜು–2 ಹಾಗೂ ಹಾವೇರಿ ವಿಭಾಗ ಹೊರತು ಪಡಿಸಿ)
02.	ರಾಜ್ಯ ಹೆದ್ದಾರಿ ಮೂರು ವರ್ಷ ನಿರ್ವಹಣೆ 2005–2008	14450	458	ಕಾಮಗಾರಿಗಳಿಗೆ ಗುತ್ತಿಗೆ ಕರೆಯಲಾಗಿದೆ.
3. ಸೇತುವೆಗಳ ನಿರ್ಮಾಣ:				

ಕ್ರ.ಸಂ	ಯೋಜನೆಯ ವಿವರ	ಕಿ.ಮೀ	ವೆಚ್ಚ (ಕೋಟಿ ರೂ. ಗಳಲ್ಲಿ)	ಪ್ಯಾಕೇಜು
01.	ಮೊದಲನೇ ಹಂತದಲ್ಲಿ ಕರ್ನಾಟಕ ರಾಜ್ಯಾದ್ಯಂತ ಸೇತುವೆಗಳ ನಿರ್ಮಾಣ	147 ಸೇತುವೆಗಳು	110	ನಿರ್ಮಾಣ ಮುಕ್ತಾಯ ಗೊಂಡಿವೆ
02.	ಎರಡನೇ ಹಂತದಲ್ಲಿ ಕರ್ನಾಟಕ ರಾಜ್ಯಾದ್ಯಂತ ಸೇತುವೆಗಳ ನಿರ್ಮಾಣ	366 ಸೇತುವೆಗಳು	200	ಕಾಮಗಾರಿಗಳಿಗೆ ಗುತ್ತಿಗೆ ಕರೆಯಲಾಗಿದೆ.
03.	ಹೇಮಾವತಿ ನದಿಗೆ ಹೇಮಗಿರಿಯಲ್ಲಿ ಸೇತುವೆ ನಿರ್ಮಾಣ	1 ಸೇತುವೆ	4	ನಿರ್ಮಾಣ ಮುಕ್ತಾಯ ಗೊಂಡಿದೆ.
04	ಕಾರವಾರ ತಾಲ್ಲೂಕು ಸದಾಶಿವಗಡ-ಗೋವಾ ಗಡಿ ರಸ್ತೆಯಲ್ಲಿ ಮಾವಿನ ಹಳ್ಳಕ್ಕೆ ಸೇತುವೆ ನಿರ್ಮಾಣ	1 ಸೇತುವೆ	2.11	ನಿರ್ಮಾಣ ಮುಕ್ತಾಯ ಗೊಂಡಿದೆ.

ಅನುಬಂಧ–2 ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ
ಫೆಬ್ರವರಿ 2005 ಕೊನೆಯವರೆಗೆ ಸಾಧಿಸಿದ ಪ್ರಗತಿ

ಕ್ರ. ಸಂ	ಪ್ಯಾಕೆಜ್	ಅಭಿವೃದ್ಧಿಪಡಿಸುವ ರಸ್ತೆ		ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಗುತ್ತಿಗೆ ಮೌಲ್ಯ ಕೋಟಿ ರೂ.	ಉದ್ದ (ಕಿ.ಮೀ)	ಒಟ್ಟಾರೆ ಪ್ರಗತಿ 28.02.2005 ರವರೆಗೆಕಿ.ಮೀ)
		ಎಲ್ಲಿಂದ	ಎಲ್ಲಿಯವರೆಗೆ					
1	2	3		4	5	6	7	8
Under Construction Supervision Consultant-I (M/s.BCEOM)								
1.	U1	ಕಲ್ಮಲ ಜಂಕ್ಷನ್	ಸಿಂಧನೂರು	ಮೆ:ಎನ್ ಸಿಸಿ–ಮೈಥಾಸ್ (ಜೆವಿ) ಹೈದರಾಬಾದ್	82.89	67.82	76	52.30
2	U2	ಸಿಂಧನೂರು	ಬೂದುಗುಂಪ ಕ್ರಾಸ್	ಮೆ:ಕೆ.ಎಂ.ಸಿ. ಕನ್‌ಸ್ಟ್ರಕ್ಷನ್ ಲಿ., ಹೈದರಾಬಾದ್	91.67	71.87	78	75.93
3.	U3	ಹತ್ತಿಗುಡೂರು	ಬೀದರ್	ಮೆ:ಹೆಚ್.ಸಿ.ಸಿ.ಎಸ್.ಇ.ಎಲ್.(ಜೆವಿ)ಮುಂಬೈ	189.47	140.01	189	107.02
4.	U4	ಬಿಜಾಪುರ	ತಿಕೋಟಿ	ಮೆ:ಭಾರತ್–ಪಿ.ಸಿ.ಸಿ.(ಜೆ.ವಿ) ಮುಂಬೈ	19.45	15.32	20	20.00
5.	U5	ಎ.ಪಿ.ಬಾರ್ಡರ್	ಕಲ್ಮಲ ಜಂಕ್ಷನ್	ಮೆ: ಮೈಥಾಸ್ ಇನ್‌ಫ್ರಾ ಲಿ., ಹೈದರಾಬಾದ್	37.20	28.57	31	26.39
6.	M2	ತಿಕೋಟಿ	ಬಾಡಜಿ	ಮೆ:ರೂಹನ್ ಬಿಲ್ಡರ್ಸ್ (ಇಂಡಿಯಾ) ಪ್ರೈ.ಲಿ., ಪುಣೆ	12.76	10.08	43	42.80
7.	M3	ಬಾಡಜಿ	ಶೆಡ್ ಬಾಳ್	ಮೆ:ಟಾರ್ ಮ್ಯಾಟ್ ಇನ್‌ಫ್ರಾಸ್ಟ್ರಕ್ಚರ್ ಮತ್ತು ಇಂಜಿನಿಯರಿಂಗ್ ಪ್ರೈ ಲಿ. ಮುಂಬೈ	15.65	13.13	50	49.42
8.	M4	ಶೆಡ್ ಬಾಳ್	ಸಂಕೇಶ್ವರ	ಮೆ: ಎಸ್.ಪಿ ಲಕ್ಷ್ಮಣನ್ ಚೆನ್ನೈ	15.23	12.29	59	46.33
9.	M12	ಸಿಂಧನೂರು	ಲಿಂಗಸುಗೂರು	ಮೆ:ಆರ್.ಎನ್.ಶೆಟ್ಟಿ ಅಂಡ್ ಕಂ., ಹುಬ್ಬಳ್ಳಿ	15.29	11.37	52	51.77
10.	M13	ಲಿಂಗಸೂರು	ಹತ್ತಿಗುಡೂರು	ಮೆ:ತಾಂತಿಯಾ ಕನ್‌ಸ್ಟ್ರಕ್ಷನ್ ಕ.,ಲಿ., ಕೊಲ್ಕತ್ತಾ	20.27	15.87	68	5454

ಕ್ರ. ಸಂ	ಪ್ಯಾಕೆಜ್	ಅಭಿವೃದ್ಧಿಪಡಿಸುವ ರಸ್ತೆ		ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಗುತ್ತಿಗೆ ಮೌಲ್ಯ ಕೋಟಿ ರೂ.	ಉದ್ದ (ಕಿ.ಮೀ)	ಒಟ್ಟಾರೆ ಪ್ರಗತಿ 28.02.2005ರ ವರೆಗೆಕಿ.ಮೀ)
		ಎಲ್ಲಿಂದ	ಎಲ್ಲಿಯವರೆಗೆ					
1	2	3		4	5	6	7	8
Under Construction Supervision Consultant-I (M/s.BCEOM)								
11.	U4	Br ಬಿಜಾಪುರ–ಟಿಕೋಟಾ ರಸ್ತೆಯಲ್ಲಿ ಸೇತುವೆ ಪುನರ್ನಿರ್ಮಾಣ ಕಾಮಗಾರಿ		ಮೆ:ಸುಪ್ರದಾ ಕನ್‌ಸ್ಟ್ರಕ್ಷನ್ಸ್, ಧಾರವಾಡ	1.65	1.65		ಗುತ್ತಿಗೆಯನ್ನು ರದ್ದುಪಡಿಸಲಾಗಿ ಹೊಸ ಗುತ್ತಿಗೆದಾರರನ್ನು ನೇಮಿಸಿ ಪ್ರಕ್ರಿಯೆ ಪ್ರಗುಸಿಸಲಾಗಿದೆ
					501.53	387.98	666.00	526.50
Under Construction Supervision Consultant-II (M/s/.SMEC)								
12	U6	ಸಂಕೇಶ್ವರ	ಯರಗಟ್ಟಿ	ಮೆ:ಟಾರೆ ಮ್ಯಾಟ್ ಇನ್ ಫ್ರಾಸ್ಟ್ಟರ್ ಮತ್ತು ಇಂಜಿನಿಯರಿಂಗ ಪ್ರೈ.ಲಿ., ಮುಂಬೈ	97.76	77.23	73	14.00
13	U7A	ಬಿಜಾಪುರ	ಕೃಷ್ಣಾ ಬ್ರಿಡ್ಜ್	ಮೆ:ಪಿ.ಬಿ.ಎ.ಇನ್ ಫ್ರಾಸ್ಟ್ಟರ್ ಮತ್ತು ಇಂಜಿನಿಯರಿಂಗ ಪ್ರೈ.ಲಿ., ಮುಂಬೈ	61.27	51.11	48	ಕಂಟ್ರಾಕ್ಟರ್ ಸಹಿ ಮಾಡಿದೆ

ಕ್ರ. ಸಂ	ಪ್ಯಾಕೆಜ್	ಅಭಿವೃದ್ಧಿಪಡಿಸುವ ರಸ್ತೆ		ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಗುತ್ತಿಗೆ ಮೌಲ್ಯ ಕೋಟಿ ರೂ.	ಉದ್ದ (ಕಿ.ಮೀ)	ಒಟ್ಟಾರೆ ಪ್ರಗತಿ 28.02.2005ರ ವರೆಗೆಕಿ.ಮೀ)
		ಎಲ್ಲಿಂದ	ಎಲ್ಲಿಯವರೆಗೆ					
1	2	3		4	5	6	7	8
14	U7B	ಕೃಷ್ಣಾ ಬ್ರಿಡ್ಜ್	ಲೋಕಾಪುರ	ಮೆ: ಪಟೇಲ್–ಕೆ.ಎನ್.ಆರ್. (ಜೆ.ವಿ) ಹೈದರಾಬಾದ್	74.32	67.62	56	ಕಂಟ್ರಾಕ್ಟ್ ಸಹಿ ಮಾಡಿದೆ.
15	U8	ಹುನಗುಂದ	ಬೆಳಗಾಂ	ಮೆ: ಕೆ.ಎಂ.ಸಿ.ಕನ್‌ಸ್ಟ್ರಕ್ಷನ್ ಲಿ., ಹೈದರಾಬಾದ್	229.48	280.93	171	35.56
16	U11	ಹಿರಿಯೂರು	ಬಳ್ಳಾರಿ	ಮೆ: ಎಲ್. ಅಂಡ್ ಟಿ, ಚೆನ್ನೈ	217.84	269.01	144	68.60
17	M29	ಯರಗಟ್ಟಿ	ಹುಲಕಟ್ಟಿ	ಮೆ: ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ ಲಿ., ಹೈದರಾಬಾದ್	17.87	13.36	30	14.00
18	M9	ಹುಳಿಯಾರ್	ಹಿರಿಯೂರು	ಮೆ:ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ ಲಿ. ಹೈದರಾಬಾದ್	25.70	21.92	49	ಗುತ್ತಿಗೆ ಕರಾರನ್ನು
19	M14	ಮರಿಯಮ್ಮನಹಳ್ಳಿ	ಇಟ್ಟಗಿ	ಮೆ:ಆರ್.ಎನ್.ಶೆಟ್ಟಿ ಅಂಡ್ ಕಂ.ಪ್ರೈ.ಲಿ., ಹುಬ್ಬಳ್ಳಿ	29.97	18.5	41	ಸಹಿ ಮಾಡಿದ್ದು
20	M15	ಇಟ್ಟಗಿ	ಹರಿಹರ	ಮೆ: ಆಫ್ ಕಾನ್ಸ್ ಇನ್ ಫ್ರಾಸ್ಟ್ರಕ್ಚರ್ ಪ್ರೈ ಲಿ., ಮುಂಬೈ	30.80	29.6	66	ಕಾಮಗಾರಿಯ
21.	M16	ಹರಿಹರ	ಹೊನ್ನಾಳಿ	ಮೆ. ರೆಡ್ಡಿ ವೀರಣ್ಣ ಕನ್‌ಸ್ಟ್ರಕ್ಷನ್ ಪ್ರೈ.ಲಿ., ಬೆಂಗಳೂರು	20.67	15.55	35	ಪ್ರಗತಿಯಲ್ಲಿದೆ
					805.68	844.83	713.00	132.16
Under Superintending Engineer, KSHIP, Raichur (Departmental Supervision)								
22	M1	ಮುದಗಲ್	ಹುನಗುಂದ	ಮೆ: ಹೆಚ್.ಪಿ. ಮಧುಕರ್, ಹುಬ್ಬಳ್ಳಿ	15.81	12.2	40	20.00
23	M30	ಕಲ್ಮಲ ಜಂಕ್ಷನ್	ಕವಿತಾಳ್	ಮೆ.: ಸತೀಶ್–ತಾಂತೀಯಾ (ಜೆ.ವಿ), ಸೋಲಾಪುರ್	32.60	21.22	50	20.40
24	M31	ಕವಿತಾಳ್	ಮುದಗಲ್	ಮೆ: ಆರ್. ಮಹೇಶ್ವರ್ ನಾಯ್ಡು–ಪ್ರಕಾಶ್ (ಜೆ.ವಿ)	27.95	19.55	52	32.23
				ಹೈದರಾಬಾದ್	76.36	52.97	142	72.63

ಕ್ರ. ಸಂ	ಪ್ಯಾಕೇಜ್	ಅಭಿವೃದ್ಧಿಪಡಿಸುವ ರಸ್ತೆ		ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಗುತ್ತಿಗೆ ಮೌಲ್ಯ ಕೋಟಿ ರೂ.	ಉದ್ದ (ಕಿ.ಮೀ)	ಒಟ್ಟಾರೆ ಪ್ರಗತಿ 28.02.2005ರ ವರೆಗೆಕಿ.ಮೀ)
		ಎಲ್ಲಿಂದ	ಎಲ್ಲಿಯವರೆಗೆ					
1	2	3		4	5	6	7	8
Under Executive Engineer, KSHIP, Yellapur								
25	M24	ಅಳ್ನಾವರ್	ಯಲ್ಲಾಪುರ	ಮೆ:ಪಟೇಲ್ ಇಂಜಿನಿಯರಿಂಗ್ ಲಿ., ಹೈದರಾಬಾದ್	32.57	24.36	57	17.50
26	M25	ಯಲ್ಲಾಪುರ	ಸಿರಸಿ	ಮೆ: ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್" ಮೊಸ್ಕೋ, ರಷ್ಯ	24.00	17.72	51	3.34
27	M26	ಸಿರಸಿ	ಮಾವಿನಗುಂಡಿ	ಮೆ:ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್" ಮೊಸ್ಕೋ, ರಷ್ಯ	23.33	17.22	53	23.50
28	M27	ಕುಂಬರವಾಡಾ	ಸದಾಶಿವಗಡ	ಗುತ್ತಿಗೆ ಇನ್ನೂ ಸಹಿ ಮಾಡಬೇಕಾಗಿದೆ	22.26	17.56	64	ಕಂಟ್ರ್ಯಾಕ್ಟ್ ಸಹಿ ಮಾಡ ಬೇಕಾಗಿದೆ
29	M28	ರಾಮನಗರ (ಲೋಂಡಾ)	ಕುಂಬರವಾಡಾ	ಮೆ:ಬಿ. ಸೀನಯ್ಯ ಅಂಡ್ ಕ., ಪ್ರಾಜೆಕ್ಟ್ ಲಿ., ಹೈದರಾಬಾದ್	19.32	15.9	57	4.00
					121.48	92.76	282	48.34
under Superintending Engineer, KSHIP, Hiriyur (Departmental Supervision)								
30	M5	ಶ್ರೀರಂಗಪಟ್ಟಣ	ಚೀನ್ಯಾ	ಮೆ: ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್" ಮೊಸ್ಕೋ, ರಷ್ಯ	19.84	11.54	32	4.45
31	M6	ಚೀನ್ಯಾ	ನೆಲ್ಲಿಗೆರೆ	ಮೆ:ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್" ಮೊಸ್ಕೋ, ರಷ್ಯ	18.93	11.97	31	5.70

ಕ್ರ. ಸಂ	ಪ್ಯಾಕೇಜ್	ಅಭಿವೃದ್ಧಿಪಡಿಸುವ ರಸ್ತೆ		ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ ರೂ. ಕೋಟಿಗಳಲ್ಲಿ	ಗುತ್ತಿಗೆ ಮೌಲ್ಯ ಕೋಟಿ ರೂ.	ಉದ್ದ (ಕಿ.ಮೀ)	ಒಟ್ಟಾರೆ ಪ್ರಗತಿ 28.02.2005ರ ವರೆಗೆಕಿ.ಮೀ)
		ಎಲ್ಲಿಂದ	ಎಲ್ಲಿಯವರೆಗೆ					
1	2	3		4	5	6	7	8
35	M7	ನೆಲ್ಲಿಗೆರೆ	ಕಿಬ್ಬನಹಳ್ಳಿ	ಮೆ:ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್" ಮೊಸ್ಕೋ, ರಷ್ಯ	22.05	14.16	47	4.00
33	M8	ಕಿಬ್ಬನಹಳ್ಳಿ	ಹುಳಿಯಾರ್	ಮೆ:ಎನ್.ಎ.ಪಿ.ಸಿ., ಚೆನ್ನೈ	14.83	11.97	36	36.46
34	M10	ಬಳ್ಳಾರಿ	ದೇವಿನಗರ	ಮೆ:ರಾಣಿ ಕನ್‌ಸ್ಟ್ರಕ್ಷನ್ ಪ್ರೈ.ಲಿ ಬೆಂಗಳೂರು	26.36	19.91	40	30.96
35	M11	ದೇವಿನಗರ	ಸಿಂಧನೂರು	ಮೆ:ಕಾರ್ಪೋರೇಷನ್ "ಟ್ರಾನ್ಸ್ ಟ್ರಾಯ್"ಮಾಸ್ಕೋ,ರಷ್ಯ	28.12	20.55	43	ಗುತ್ತಿಗೆ ದಾರರನ್ನು ಟರ್ಮಿನೇಟ್ ಮಾಡಲಾಗಿದೆ.
36	M17	ಹೊನ್ನಾಳಿ	ಶಿವಮೊಗ್ಗ	ಮೆ:ಐಂ.ವೆಂಕಟರಾವ್, ವಿಶಾಖಪಟ್ಟಣಂ	12.65	11.48	41	41.22
37	M18	ಬೇಲೂರು	ಚಿಕ್ಕಮಗಳೂರು	ಮೆ:ಮೈಥಾಸ್ ಇನ್‌ಫ್ರಾ ಲಿ., ಹೈದರಾಬಾದ್	8.27	8.18	24	24.00
38	M19	ಚಿಕ್ಕಮಗಳೂರು	ತರೀಕೆರೆ	ಮೆ:ಎಲ್ ಅಂಡ್ ಟಿ, ಬೆಂಗಳೂರು	15.32	14.94	57.00	57.70
39	M32	ಮೈಸೂರು	ಮಾನಂತವಾಡಿ (ಕೇರಳ ಬಾರ್ಡರ್)	ಮೆ; ಕೆ.ಎನ್.ಆರ್. ಕನ್‌ಸ್ಟ್ರಕ್ಷನ್ ಲಿ., ಹೈದರಾಬಾದ್	34.14	23.87	59	15.80
40	Br	ಸೇತುವೆಗಳು-9nos		ಮೆ:ಎಸ್.ವಿ. ಲಕ್ಷ್ಮಣನ್. ಚೆನ್ನೈ	2.42	2.45	9Bridges	
					202.93	151/02	410	220.29

DETAILS OF APPROVED CENTRAL ROAD FUND WORKS
SANCTIONED DURING THE YEAR 2000-01, 2001-02, 2002-03, 2003-04 & 2004-05

District	2000-01		2001-02		2002-03		2003-04		2004-05		Grand Total	
	No. of works	Estd.cost (Rs. in Lakhs)	No. of works	Estd.cost (Rs. in Lakhs)	No. of works	Estd.cost (Rs. in Lakhs)	No. of works	Estd.cost (Rs. in Lakhs)	No. of works	Estd.cost (Rs. in Lakhs)	No. of works	Estd.cost (Rs. in Lakhs)
BAGALKOT	1	215.37	4	262.00	2	120.00	2	110.00	2	150.00	11	857.37
BANGALORE (RURAL)	1	232.50	6	545.00	1	80.00	5	395.00	3	190.00	16	1442.50
BANGALORE (URBAN)							2	130.00			2	130.00
BELGAUM	10	1084.55	4	285.00	2	130.00	6	410.00	2	140.00	24	2049.55
BIDAR	6	492.97	4	240.00	5	360.00	8	790.00	2	125.00	25	2007.97
BIJAPUR	1	104.00	5	300.00			4	280.00	3	200.00	13	884.00
CHAMARAJANAGAR			1	61.00	4	210.00			1	70.00	6	341.00
CHIKKAMAGALORE			7	381.00	2	130.00	3	192.00	4	315.00	16	1018.00
CHITRADURGA			3	182.00	2	120.00	2	55.00	1	40.00	8	397.00
DAKSHINA KANNADA	2	436.10	2	113.00	4	260.00	11	790.00			19	1599.10
DAVANAGERE			3	230.00	2	150.00	8	430.00			13	810.00
DHARWAD			2	161.87	6	400.00	11	580.00	2	110.00	21	1251.87
GADAG			3	250.00	1	50.00	5	365.00	1	200.00	13	865.00
GULBARGA	4	415.76	10	617.40	4	300.00	5	305.00	2	120.00	25	1758.16
HASSAN	3	150.50	7	586.23	1	270.00	11	743.94	10	1610.00	35	3360.67
HAVERI			2	100.00	3	180.00	4	270.00	4	275.00	13	825.00
KODAGU			1	55.00	1	60.00	3	170.00			5	285.00
KOLAR	1	69.61	4	159.00	1	50.00	6	505.00	19	915.00	31	1698.61
KOPPAL			3	150.00	1	60.00	2	130.00	1	250.00	10	590.00
MANDYA			16	1797.00			2	145.00	1	70.00	19	2012.00
MYSORE			3	180.00	1	80.00	2	130.00	3	170.00	9	560.00
RAICHUR			5	228.99	1	70.00	1	50.00	1	70.00	8	418.99
SHIMOGA	1	36.80	2	174.00	4	250.00	2	150.00	3	330.00	12	940.80
TUMKUR	3	1566.59	1	300.00	5	225.00	10	1270.00	1	70.00	20	3431.59
UDUPI			3	192.20	5	380.00	4	300.00			12	872.20
UTTARA KANNADA			2	68.00	1	50.00	10	740.00	1	30.00	14	888.00
Total:	33	4804.75	103	7618.69	62	3955.00	129	9435.94	73	5450.00	400	31294.38

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದ ವಿಷಯವಾದ ಹಿನ್ನಲೆಯಲ್ಲಿ ನಿಲುವಳಿ ಸೂಚನೆಯ ಮೂಲಕ ಕಳುಹಿಸಿದ್ದೆವು. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಪಿಡಬ್ಲ್ಯೂಡಿ ಗೆ ಈ ವರ್ಷ ಹೆಚ್ಚಿಗೆ ಹಣವನ್ನು ಈ ಭಾರಿ ಕೊಟ್ಟಿದ್ದಾರೆ. ಹಾಗಾಗಿ ಮುಂದೆ ರಸ್ತೆಗಳೆಲ್ಲವು ಒಳ್ಳೆಯ ರೀತಿಯಲ್ಲಿ ಸುಧಾರಣೆಯಾಗಬಹುದು ಬೇರೆ ಬೇರೆ ಲೋನ್‌ಗಳಿಂದ ಎಂದು ನಾವು ಊಹಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಷಯ ಪ್ರಸ್ತಾಪಿಸುವುದೇನೆಂದರೆ, ನ್ಯಾಷನಲ್ ಹೈವೆ, ಆ ಪಿಡಬ್ಲ್ಯೂಡಿ ರಸ್ತೆಗಳು, ಅದಲ್ಲದೆ ಜಿಲ್ಲಾ ಪಂಚಾಯತಿ ರಸ್ತೆಗಳು, ಇದು ಅಲ್ಲದೆ ಇರತಕ್ಕಂಥ ಗ್ರಾಮೀಣ ಪ್ರದೇಶದ ರಸ್ತೆಗಳು, ಹೀಗೆ ಅನೇಕ ರೀತಿಯ ರಸ್ತೆಗಳು ನಾವು ಬಳಸುತ್ತಿದ್ದೇವೆ. ರಾಷ್ಟ್ರೀಯ ಹೆದ್ದಾರಿ ನಿರ್ವಹಣೆಗೆ ಸಾಕಷ್ಟು ಅನುದಾನ ಕೇಂದ್ರದಿಂದಲೂ ಬರುತ್ತಿರುವುದರಿಂದ ಯೋಚನೆ ಮಾಡಿದರೆ ರಾಷ್ಟ್ರೀಯ ಹೆದ್ದಾರಿಗಳು ಸುಧಾರಣೆಯಗುತ್ತಿವೆ. ಇನ್ನು ಆಗಬೇಕಾದದ್ದು ಅನೇಕ ಭಾಗಗಳು ಇವೆ. ನಾನು ಆ ವಿಷಯಕ್ಕೆ ಹೋಗುವುದಿಲ್ಲ. ಈ ಪಿಡಬ್ಲ್ಯೂಡಿ ರಸ್ತೆಗಳು, ರಾಜ್ಯ ಹೆದ್ದಾರಿ ರಸ್ತೆಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯ ರಸ್ತೆಗಳನ್ನು, ಗ್ರಾಮೀಣ ಅಭಿವೃದ್ಧಿ ರಸ್ತೆಗಳನ್ನು, ಇದರೊಳಗೆ ಮುಖ್ಯವಾಗಿ ಎರಡು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದು. ಕೇಷಿಪ್ ವಿಷಯ. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಅನೇಕ ಪ್ಯಾಕೇಜ್ ಗಳನ್ನು ತೆಗೆದುಕೊಂಡಿದ್ದಾರೆ. ನಾನು ಆ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ. ಆದರೆ ಸುಮಾರು 10–12 ಪ್ಯಾಕೇಜ್‌ಗಳು ಇಷ್ಟರೊಳಗಾಗಿ ಕೆಲಸವನ್ನು ಮುಗಿಸಿ 8 ತಿಂಗಳು ಆಗಬೇಕಾಗಿತ್ತು. ಆದರೆ ಕೆಲಸವೆ ಪ್ರಾರಂಭವಾಗಿಲ್ಲ, ಕೆಲಸ ಪ್ರಾರಂಭವಾಗಿದ್ದರೂ ಕೂಡ 2–3 ಕಿ.ಮೀ. ಕೆಲಸ ಪ್ರಗತಿಯಾಗಿರುವುದು ನಮ್ಮ ಕಣ್ಣ ಮುಂದಿದೆ. ನಮ್ಮ ಜಿಲ್ಲೆಯ ನನ್ನ ಕ್ಷೇತ್ರದಲ್ಲಿ ಎಂ–25 ಮತ್ತು ಎಂ.26 ಪ್ಯಾಕೇಜ್ ಗಳು, ಕೇಷಿಪ್‌ನಿಂದಾಗಿ ಶಿರ್ಶಿ–ಯಲ್ಲಾಪುರ ಶಿರ್ಶಿ–ಮಾವಿನಗುಂಡಿ ಈ ಎಲ್ಲಾ ರಸ್ತೆಗಳು, ವಸ್ಕೋದ ಒಂದು ಕಂಪನಿ ಟ್ರಾನ್ಸ್ ಟ್ರಾಯ್ ಅವರಿಗೆ ಈ ಗುತ್ತಿಗೆಯಾಗಿದೆ. 50 ಕಿ.ಮೀ.ದಲ್ಲಿ 3 ಕಿ.ಮೀ. ರಸ್ತೆಯನ್ನು ಮಾತ್ರ ಮಾಡಿದ್ದಾರೆ. ಕಳೆದ ಅಕ್ಟೋಬರ್ ತಿಂಗಳಿಗೆ ಕೆಲಸವನ್ನು ಅವರ ಟೆಂಡರ್ ಪ್ರಕಾರ ಮುಗಿಸಬೇಕಾಗಿತ್ತು. ಸರ್ಕಾರ ಅವರನ್ನು ನಿಜವಾಗಿ ಟರ್ಮ್‌ನೇಟ್ ಮಾಡಬೇಕು. 1.70 ಕೋಟಿ ರೂ.ಗಳ ಅವರಿಗೆ 10 ಪರ್ಸೆಂಟ್ ಪೆನಾಲ್ಟಿಯನ್ನು ಹಾಕಿದ್ದಾರೆ. ಆದರೆ ಅವರ ಟರ್ಮ್‌ನೇಟ್ ಆಗುತ್ತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ

ಚೀಪ್ ಸೆಕ್ರೆಟರಿಯವರಿಗೆ ವಿನಂತಿಸಿಕೊಂಡಿರುತ್ತೇನೆ. ಮಾನ್ಯ ಪಿಡಬ್ಲೂಡಿ ಸಚಿವರಿಗೆ ವಿನಂತಿಸಿಕೊಂಡಿರುತ್ತೇನೆ. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಯಾವ ಒತ್ತಡವೋ ಏನೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಇವತ್ತಿನವರೆಗೂ ಆ ಗುತ್ತಿಗೆದಾರರನ್ನು ಬಂಧಿಸುವುದಕ್ಕಾಗುತ್ತಿಲ್ಲ. ರಸ್ತೆಗಳನ್ನು ಅವರು ಅಗೆದು ಹೋಗಿ ಬಿಟ್ಟಿದ್ದಾರೆ. ನಮ್ಮ ಕತೆ ಅಲ್ಲಿ ಬೇಡ, ಅಲ್ಲಿ ಗುಂಡಿ ಬಿದ್ದಿದ್ದನ್ನು ನೋಡುವವರು ಯಾರು ಇಲ್ಲ, ಓಡಾಡುವುದಕ್ಕೆ ಸಾಧ್ಯವಿಲ್ಲ. ಅ ಭಾಗದಲ್ಲಿ ಇವತ್ತು ದೊಡ್ಡ ಪ್ರತಿಭಟನೆಗಳು ಆಗಿವೆ. ಸ್ಟ್ರೈಕ್ ಇತ್ಯಾದಿಗಳು ಆಗಿದೆ. ಆದರೂ ಸರ್ಕಾರ ಗುತ್ತಿಗೆದಾರರನ್ನು ಬದಲಾಯಿಸದೆ ಅದೇ ಗುತ್ತಿಗೆದಾರನನ್ನು ಮುಂದುವರೆಸಿಕೊಂಡು ಹೋಗುತ್ತಿದೆ. ಮೊಸ್ಕೊಗೆ ಹೋಗಿ ನಾವು ಆ ಗುತ್ತಿಗೆದಾರರನನ್ನು ಹಿಡಿದುಕೊಂಡು ಬರಬೇಕು, ನಮ್ಮ ಕತೆ ನೋಡಿ ಈ ಗುತ್ತಿಗೆಯನ್ನು ಕೊಟ್ಟಿರುವುದು ಕಾರ್ಪೋರೇಷನ್ ಟ್ರಾನ್ಸ್‌ಟ್ರಾಯ್ ಇವರನ್ನು ನಾವು ವಸ್ಕೋಗೆ ಹೋಗಿ ಹಿಡಿದುಕೊಂಡು ಬರಬೇಕೆ? ಆಂಧ್ರದವರಿಗೆ ಸಬ್ ಕಾಂಟ್ರಾಕ್ಟ್ ಅವರು ಕೊಟ್ಟಿದ್ದಾರಂತೆ, ಅವರು ಕಾಂಗ್ರೆಸ್ ಪಕ್ಷದ ಎಂ.ಪಿ. ಏನೋ ಇದ್ದಾರೆಂದು ಕಾಣಿಸುತ್ತದೆ ನಾನು ರಾಜಕಾರಣಕ್ಕೆ ಹೋಗುವುದಿಲ್ಲ, ಏಕೆಂದರೆ ಆ ವಿಷಯ ಬೇಡ. ಆ ಎಲ್ಲಾ ಕಾರಣದಿಂದ ರಸ್ತೆ ಕೆಲಸ ನಿಂತಿದೆಯೋ ಏನೋ, ಅದಕ್ಕಾಗಿ ಆ ಗುತ್ತಿಗೆದಾರನನ್ನು ಬದಲಾಯಿಸುತ್ತಿಲ್ಲ ಎನ್ನುವ ಅನುಮಾನ, ಇದು ಏನು ಇದೆಯೋ ಗೊತ್ತಿಲ್ಲ. ಆದರೆ ಸರ್ಕಾರ ಹೀಗೆ ಗುತ್ತಿಗೆದಾರರನ್ನು ಸಡಿಲ ಬಿಟ್ಟರೆ ಸರ್ಕಾರದ ಗೌರವ ಏನು ಉಳಿಯುತ್ತದೆ. ಹಾಗಾಗಿ ತಕ್ಷಣದಲ್ಲಿಯೇ ಆ ಗುತ್ತಿಗೆದಾರನನ್ನು ಟರ್ಮ್‌ನೇಟ್ ಮಾಡಲೇಬೇಕು. ಯಾವ ಒತ್ತಡ ಇದೆಯೋ ಗೊತ್ತಿಲ್ಲ, ಯಾವ ಒತ್ತಡ ಇದ್ದರೂ ಅದಕ್ಕೆ ಸರ್ಕಾರ ಬಲಿಯಾಗಬಾರದು, ಅವರು ಏನು ಟೆಂಡರ್ ಹಾಕಿ ಕೆಲಸವನ್ನು ತೆಗೆದುಕೊಂಡಿದ್ದಾರೆ ಟ್ರಾನ್ಸ್‌ಟ್ರಾಯ್ ಕಂಪನಿಯವರು, ಅವರು ಸುಮ್ಮನೆ ಪುಕ್ಕಟೆಯಾಗಿ ಮಾಡಿಸುತ್ತಿಲ್ಲ.ಹಾಗಾಗಿ ಯಾವುದಕ್ಕೂ ಸರ್ಕಾರ ಬಲಿಯಾಗದೆ ಅದನ್ನು ಮಾಡಬೇಕೆಂದು ಹೇಳುತ್ತೇನೆ. ಟೇಕನ್–ಓವರ್–ರಸ್ತೆ ಎಂದು ಇದೆ, ಅದರ ಬಗ್ಗೆ ಕನ್ನಡಪ್ರಭ ಪತ್ರಿಕೆಯಲ್ಲಿ ಒಂದು ಅರ್ಟಿಕಲ್ ಬಂತು, ಅದರ ಬಗ್ಗೆ ನಾನು ಪ್ರಶ್ನೆಯನ್ನು ಶೂನ್ಯ ವೇಳೆಯಲ್ಲಿ ಕೂಡ ಕೇಳಿರುತ್ತೇನೆ. ಈ ರಸ್ತೆ ನಮ್ಮ ರಾಜ್ಯದಲ್ಲಿ 20 ಸಾವಿರ ಕಿ.ಮೀ. ಇದೆ ಎಂದು ವರದಿ ಬಂದಿದೆ. ನನ್ನ ಜಿಲ್ಲೆಯಲ್ಲಿ 5 ಸಾವಿರ ಕಿ.ಮೀ. ಇದೆ. ಅದಕ್ಕಾಗಿ ಇಲ್ಲಿಯವರೆಗೆ ಪಿಡಬ್ಲ್ಯೂಡಿ ಇಲಾಖೆಯಿಂದ, ಝಡ್.ಪಿ ಯಿಂದ ಗ್ರ್ಯಾಂಟ್ ಇಲ್ಲ, ಯಾರು ಹೇಳುವವರು ಕೇಳುವವರು ಇಲ್ಲ. ನಾವು ಕೇಳಿದರೆ, ಮಾನ್ಯ ಮುಖ್ಯಮಂತ್ರಿಗಳ

ರಸ್ತೆ ನಿರ್ವಹಣಾ ನಿಧಿಯಿಂದ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಒಂದು ಕ್ಷೇತ್ರಕ್ಕೆ 8 ಲಕ್ಷ ರೂ.ಗಳೆಂದು ಕೊಡುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ 5 ಸಾವಿರ ಕಿ.ಮೀ. ಇದೆ. ಬಸ್ಸು ಓಡಾಡುವಂಥ ಮುಖ್ಯ ರಸ್ತೆ, 100 ಇಂಚುವರೆಗೆ ಅತೀಯಾದ ಮಳೆ, ರಸ್ತೆ ನಿರ್ವಹಣೆ ಇಲ್ಲ, ಅಲ್ಲಿರುವ ಅಧಿಕಾರಿಗಳಿಗೆ ಹೇಳಿದರೆ ಸರ್ ಅನುದಾನವಿಲ್ಲವೆಂದು ಹೇಳುತ್ತಾರೆ. ನಾನು ಮೂರನೇ ಭಾರಿಯಾಗಿ ಅಯ್ಕೆಯಾಗಿ ಬಂದಿರುವುದು, ಇದರ ಬಗ್ಗೆ ನಾನು ಪ್ರತಿಬಾರಿ ಹೇಳುತ್ತಾ ಇರುತ್ತೇನೆ. ಯಾರೂ ಇದರ ಬಗ್ಗೆ ಲಕ್ಷ್ಯ ತೆಗೆದುಕೊಳ್ಳುತ್ತಿಲ್ಲ, ಅನುದಾನವನ್ನು ಕೊಡುತ್ತಿಲ್ಲ. ಗ್ರಾಮೀಣ ಅಭಿವೃದ್ಧಿ ರಸ್ತೆಗಳು ಹಾಳಾಗಿ ಹೋಗುತ್ತಿವೆ. ಅಲ್ಲಿ ಸಂಪರ್ಕ ಮತ್ತು ಸೌಕರ್ಯಗಳು ಹೆಚ್ಚಾಗುತ್ತಿಲ್ಲ. ಹಾಗಾಗಿ ಅಲ್ಲಿ ಬಹಳ ತೊಂದರೆ ಇದೆ. ನಬಾರ್ಡ್ ಯೋಜನೆಯಿಂದಾಗಲಿ, ಪ್ರಧಾನಮಂತ್ರಿ ಸಡಕ್ ಯೊಜನೆಯಿಂದಾಗಲಿ, ಮುಖ್ಯಮಂತ್ರಿಗಳ ನಿಧಿಯಿಂದಾಗಲಿ, ಬೇರೆ ಬೇರೆ ಯೋಜನೆಯಲ್ಲಿ ಈ ರೀತಿ ಇರುವ ರಸ್ತೆಗಳಿಗೆ ಆದ್ಯತೆಯ ಮೇಲೆ ರಸ್ತೆಗಳ ಕೆಲಸವಾಗುವಂತೆ ನೋಡಬೇಕು. ರಸ್ತೆಗಳು ಇಂದು ಹೊಂಡ ಬಿದ್ದು ಹೋಗಿವೆ. ಪಿಡಬ್ಲ್ಯೂಡಿ ರಸ್ತೆಗಳು ಇರಲಿ, ಅಥವಾ ಬೇರೆ ಬೇರೆ ರಸ್ತೆಗಳು ಇರಲಿ, ಝಡ್.ಪಿ. ರಸ್ತೆಗಳಿಗೆ ಹೇಳುವವರು ಕೇಳುವವರು ಇಲ್ಲ, ಆ ರಸ್ತೆಗಳಿಗೆ ನಿರ್ವಹಣೆ ಮಾಡುವುದಕ್ಕೆ ದುಡ್ಡು ಇಲ್ಲ. ಮಲೆನಾಡಿನ ಪ್ರದೇಶದ ಹೆಚ್ಚಿನ ಮಳೆಯಾಗುವ ಕಡೆಗಳಲ್ಲಿ ನಿರ್ವಹಣೆಗೆ ಹೆಚ್ಚಿನ ಹಣವನ್ನು ಕೊಡಬೇಕು. ಇದೆಲ್ಲದರ ಹಿನ್ನಲೆಯಲ್ಲಿ ರಸ್ತೆಗಳ ಬಗ್ಗೆ ಸರ್ಕಾರ ಸಮಗ್ರವಾಗಿ ಯೋಚನೆ ಮಾಡುವುದಕ್ಕೆ ಒಂದು ಸಮಗ್ರವಾದ ಚಿಂತನೆಯನ್ನು ಮಾಡಬೇಕು. ಯಾವ್ಯಾವ ಪ್ಯಾಕೇಜ್ ರಸ್ತೆಗಳನ್ನು ಯಾರ್ಯಾರು ಮಾಡುತ್ತಿದ್ದಾರೆನ್ನುವ ಬಗ್ಗೆ ಮಾಡಬೇಕು. 100 ಬ್ರಿಡ್ಜ್‌ಗಳನ್ನು ಮಾಡುವುದಕ್ಕೆ ಕೆಆರ್‌ಡಿಸಿಯಿಂದ ಲಿಸ್ಟ್ ತೆಗೆದುಕೊಂಡಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ಬ್ರಿಡ್ಜ್‌ಗಳು ಎಲ್ಲೆಲ್ಲಿ ಆಗಬೇಕೆನ್ನುವ ಬಗ್ಗೆ ಒಬ್ಬರಾದರೂ ಇನ್ಸ್‌ಪೆಕ್ಷನ್ ಮಾಡಿದ್ದಾರೆಯೇ? ಒಬ್ಬರೂ ಇನ್ಸ್‌ಪೆಕ್ಷನ್ ಮಾಡಿಲ್ಲ. ದಯವಿಟ್ಟು ಅವರು ಎಲ್ಲೆಲ್ಲಿಯೋ ಮಾಡಿಸುವುದರ ಬದಲು ಅಗತ್ಯ ಇರುವ ಕಡೆ ಮಾಡಿಸಬೇಕು. ಬ್ರಿಡ್ಜ್ ಇರುವಲ್ಲಿಯೇ ಮತ್ತೊಂದು ಬ್ರಿಡ್ಜ್ ಆಗುವುದು ಬೇಡ. ಹಾಗಾಗಿ ಸ್ಥಳ ಪರೀಕೆ ಮಾಡಿ ಸೂಕ್ತವಾಗಿರುವುದನ್ನು ನಿಗದಿ ಮಾಡಿ ಆ ಎಲ್ಲ ಕೆಲಸಗಳು ಆಗುವಂತೆ ನೋಡಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಟ್ಟಾರೆಯಾಗಿ ಸಮಗ್ರವಾದ ಒಂದು ಉತ್ತರವನ್ನು ಹೇಳಿ ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು–ಮೂರು ಸಂಗತಿಗಳೂ ಇವೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಈಗಾಗಲೇ ನಮ್ಮ ವಿಶ್ವೇಶ್ವರ ಹೆಗಡೆಯವರು ಹೇಳಿದಂತೆ ಒಟ್ಟು ನಿಮ್ಮ ಕೈ ಕೆಳಗಡೆ 51,872 ಕಿ.ಮೀ. ರಸ್ತೆ ಇದೆ. ದೇವರು ದೊಡ್ಡವನು ನಿಮ್ಮ ಪುಣ್ಯ ಮಳೆಯಾಗಲಿಲ್ಲ ಕಳೆದ ಮೂರು ವರ್ಷಗಳಿಂದ, ನಿಮ್ಮ ದೃಷ್ಟಿಯಿಂದ ಒಳ್ಳೆಯದಾಯಿತು. ಪ್ರತಿ ವರ್ಷದಂತೆ ಮಳೆಯಾಗಿದ್ದರೆ ಮಾನ್ಯ ರೇವಣ್ಣನವರಿಗೆ ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡುತ್ತಿರಲಿಲ್ಲ, ಆ ಪರಿಸ್ಥಿತಿ ಒದಗಿ ಬರುತ್ತಿತ್ತು. ನಿಮ್ಮ ದೃಷ್ಟಿಯಿಂದ ಒಳ್ಳೆಯದಾಯಿತು ಅಷ್ಟೆ. ಪ್ರತಿ ವರ್ಷ ಆಗುವಂತೆ ಮಳೆ ಆಗಿದ್ದಿದ್ದರೆ ಬಹುಶಃ ರೇವಣ್ಣನವರನ್ನು ಇಲ್ಲಿ ಕುಳಿತುಕೊಳ್ಳುವುದಕ್ಕೆ ನಾವು ಬಿಡುತ್ತಿರಲಿಲ್ಲ. ಆ ಪರಿಸ್ಥಿತಿ ನಿಮಗೆ ಒದಗಿಬರುತ್ತಿತ್ತು. ಇಷ್ಟಿದ್ದರೂ ಈ ರಾಜ್ಯದಲ್ಲಿನ ರಸ್ತೆಯ ಸ್ಥಿತಿ ನೋಡಿದರೆ... ಆ ದೇವರೇ ಕಾಪಾಡಬೇಕು ಇದು ಮೊದಲನೆಯದು. ಎರಡನೆಯದಾಗಿ ನೀವು ಹೊರ ರಾಜ್ಯದವರನ್ನು, ಬೇರೆ ಬೇರೆ ದೇಶದವರನ್ನು ಗುತ್ತಿಗೆದಾರರಾಗಿ ಏತಕ್ಕೆ ಕರೆದುಕೊಂಡು ಬರುತ್ತಿದ್ದೀರಿ? ಇದರ ಹಿನ್ನೆಲೆಯೇನು? ಮೂರನೆಯದಾಗಿ ಎಸ್ಟಿಮೇಟ್ ಕಾಸ್ಟ್‌ಗಿಂತ, ನಾನು ನಿಮಗೆ ಹೇಳಬಯಸುವುದೇನೆಂದರೆ, ಶೇಕಡ 30,35,40 ರಷ್ಟು ಈ ಕರ್ನಾಟಕ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಪ್ಯಾಕೇಜ್–ಯು 8, ಕ್ರಮ ಸಂಖ್ಯೆ 15,16,17 ಇವನ್ನೆಲ್ಲ ನೀವು ನೋಡಿದರೆ, ಆ ಕಂಪೆನಿಗಳನ್ನು ನೋಡಿಕೊಳ್ಳುತ್ತಾ ಬಂದರೆ, ಕೆ.ಎಂ.ಸಿ. ಹೈದರಾಬಾದ್ ಶೇ.38ರ ಮೇಲೆ ಎಲ್.ಎನ್.ಟಿ. ಚೆನ್ನೈ–ಶೆ. 30 ಮೆಸರ್ಸ್ ವೆಂಕಟರಾವ್, ವಿಶಾಖಪಟ್ಟಣ–ಶೇ. 30ರ ಮೇಲೆ ಮೆಸರ್ಸ್ ಮದ್ರಾಸ್ ಇನ್‌ಫ್ರಾಸ್ಟ್ರಕ್ಚರ್ ಹೈದರಾಬಾದ್ ಅದು ಅಷ್ಟೆ. ಈ ರೀತಿ ನೀವು ಹೊರಗಡೆಯವರಿಗೆ ಶೇಕಡ 30–35 ರಷ್ಟು ಕೊಟ್ಟು ಕರೆದುಕೊಂಡು ಬರುತ್ತಿದ್ದೀರಿ, ಅವರ್ಯಾರು ಸಹ ಇಲ್ಲಿ ಕೆಲಸವನ್ನು ಮಾಡುತ್ತಿಲ್ಲ. ಇಲ್ಲಿ ಸಬ್ ಕಂಟ್ರಾಕ್ಟ್ ಕೊಟ್ಟು, ಅವರೇನು ಮಾಡುತ್ತಾರೆ ಅದೇ ಕೆಲಸ, ಅವರು ಮಾತ್ರ ಹಣ ಪಡೆದುಕೊಂಡು ಮಜಾ ಮಾಡಿಕೊಂಡು ಇರುತ್ತಾರೆ, ಇದು ಇಡೀ ರಾಜ್ಯದಲ್ಲಿರುವ ಕರ್ಮ ಕಥೆ. ನಿಮ್ಮ ಕಾಲದಲ್ಲಾದರೂ ಸಹ ಇದಕ್ಕೆ ಇಲ್ಲ ಸಲ್ಲದ ಷರತ್ತುಗಳನ್ನು

ಹಾಕಬೇಕು.ಇದರಿಂದ ಈ ರಾಜ್ಯದಲ್ಲಿರತಕ್ಕಂತಹ ಯಾರೋ ಒಬ್ಬ ಮಧ್ಯಮ ವರ್ಗದವರು ಒಬ್ಬ 'ಎ' ಕ್ಲಾಸ್ ಕಂಟ್ರಾಕ್ಟರ್‌ನ್ನು ಕರೆಸಿಕೊಂಡು ಕೆಲಸ ಮಾಡಿಸಬಾರದು, ಹೊರಗಡೆಯವರು ಬಂದು ಇಲ್ಲಿ ಬಹಳ ಗೋಪ್ಯವಾಗಿ ಏನಾದರೂ ಸ್ವಲ್ಪ ಕೆಲಸಗಳು ಆಗಬೇಕೆನ್ನುವುದು ಬಹಳ ವ್ಯವಸ್ಥಿತವಾಗಿ ಕಾಣುತ್ತಿದೆ. ಇದನ್ನು ಕೊನೆಗಾಣಿಸುವ ಪ್ರಾಮಾಣಿಕ ಪ್ರಯತ್ನವನ್ನು ತಾವು ಮಾಡುವಿರಾ? ಎರಡನೆಯದು ರೇವಣ್ಣನವರಿಗೆ ಒಂದು ಮಾತು ಹೇಳುತ್ತೇನೆ, ಕರ್ನಾಟಕ ರಾಜ್ಯದಲ್ಲಿ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಫೆಬ್ರವರಿ 2005ರ ಕೊನೆಯವರೆಗೂ ಸಾಧಿಸಿದ ಪ್ರಗತಿ ಎಂದು ಕೊಟ್ಟಿರುವ ನಿಮ್ಮ ಅಂಕಿ-ಅಂಶಗಳಲ್ಲಿ 45 ತಾಲೂಕುಗಳ ವಿವರಗಳನ್ನು ಕೊಟ್ಟಿದ್ದೀರಿ ಅದರಲ್ಲಿ ಪ್ರತಿಪಕ್ಷದ ಕಡೆಗೆ ಕುಳಿತ ಸದಸ್ಯರಿಗೆ 6-7 ಮಂದಿಗೆ ಮಾತ್ರ ವಿವರ ನೀಡಿದ್ದೀರಿ. ವಾಟಾಳ್ ನಾಗರಾಜ್ ಇವರೆಲ್ಲ ಸೇರಿ ಅವರಿಗೆ ಮಾತ್ರ ವಿವರವನ್ನು ನೀಡಿರುತ್ತೀರಿ, ಇದು ಒಂದು ರೀತಿಯ ತಾರತಮ್ಯ ಅಲ್ಲವೇ? ಇದು ಸರಿಯೇ? ಆ ಶಾಸಕರು ಅಲ್ಲಿ ಗೌರವದಿಂದ ಹೋರಾಟ ಮಾಡಲಿಕ್ಕೆ ಸಾಧ್ಯವೇ? ಈ ಬಗ್ಗೆ ಕೂಡ ತಾವು ಯೋಚನೆಯನ್ನು ಮಾಡಬೇಕು. ಸಿ.ಆರ್.ಎಫ್. ಫಂಡ್ ನಿಂದ ಕಳೆದ 4-5 ವರ್ಷಗಳ ಫಂಡ್ ಅನ್ನು ತೆಗೆದುಕೊಂಡು ನೋಡಿದರೆ ಬಹಳ ದೊಡ್ಡ ಪ್ರಮಾಣದಲ್ಲಿ ಹಣವನ್ನು ತರುತ್ತಿದ್ದೆವು. ನೀವು ಏಕೆ ಈ ಬಾರಿ ಹಣವನ್ನು ತರುವುದಕ್ಕೆ ವಿಫಲರಾಗಿದ್ದೀರಿ? ತಂದ ಹಣ ಎರಡು ಜಿಲ್ಲೆಗಳಿಗೆ ಸೀಮಿತವಾಗಿದೆಯೇ ಹೊರತು ಇಡೀ ರಾಜ್ಯಕ್ಕೆ ಹಂಚಿಕೆಯಾಗಿಲ್ಲ, ಈಗಾಗಲೇ ಮಾತನಾಡುತ್ತ 9 ತಿಂಗಳು ಕಳೆದು ಹೋಯಿತು, ಈ ಬಾರಿ ಶ್ರೀ ಸಿದ್ಧರಾಮಯ್ಯನವರು ದೊಡ್ಡ ಮನಸ್ಸು ಮಾಡಿ ಸ್ವಲ್ಪ ಜಾಸ್ತಿ ಹಣ ಕೊಟ್ಟಿದ್ದರೂ ಸಹ ಅದು ಯಾವುದಕ್ಕೂ ಸಾಕಾಗುವುದಿಲ್ಲ, ಇನ್ನೂ 500 ಕೋಟಿ ರೂಪಾಯಿ ಎಕ್ಸ್‌ಟ್ರಾ ಕೊಟ್ಟರೆ ನಾವು ಗೌರವದಿಂದ ಇರಬಹುದು, ನೀವು ಮಾತೆತ್ತಿದ್ದರೆ 50.00 ಲಕ್ಷ ರೂ. ಕೊಟ್ಟಿದ್ದೇವೆಂದರೆ ನಮ್ಮನ್ನು ಕಿತ್ತು ತಿನ್ನುತ್ತಾರೆ, ಎಂ.ಪಿ.ಗಳನ್ನು ಸಮಾರಂಭಕ್ಕೆ ಕರೆದು ಹಾರ ಹಾಕುತ್ತಿದ್ದರು, ಅವರು ಏನಾದರೂ ಹಣವನ್ನು ಕೊಡುತ್ತಾರೆಂದು ಭಾವಿಸಿದ್ದರು, ಈಗ ಅದೇ ರೀತಿ ಎಂ.ಎಲ್.ಎ. ಇವರನ್ನು ಸಹ ಕಾರ್ಯಕ್ರಮಕ್ಕೆ ಕರೆಯುತ್ತಾರೆ, ಹಾಗಾಗಿ ನಾವು ಐವತ್ತು ಕಡೆ ಹೋಗಿ ಬಂದರೆ 50.00 ಲಕ್ಷ ರೂ. ಮುಗಿದುಹೋಗುತ್ತದೆ. ಇದು ಒಂದು ರೀತಿ ಶಾಪ. ಹಾಗಾಗಿ ನಾನು ಒಂದೆರಡು ಮೂರು ಸಂಗತಿಗಳನ್ನು ಹೇಳುತ್ತೇನೆ ಅಷ್ಟೆ. ಮೊದಲನೆಯದಾಗಿ ತಾರತಮ್ಯವಾಗದ ರೀತಿ ಪ್ರತಿಪಕ್ಷದ ಕಡೆ ಗಮನ ಕೊಟ್ಟು ಈಗ ಈ 9 ತಿಂಗಳು ಏನು ಕೊರತೆಯಾಗಿದೆ ಅದನ್ನು ತುಂಬಿ ಈ

ಭಾಗದವರಿಗೆ ನೀಡಬೇಕು. ಎರಡನೆಯದಾಗಿ ಹೊರರಾಜ್ಯದವರನ್ನು ಕೈಬಿಟ್ಟು ಇಲ್ಲಿರುವವರಿಗೆ ಕೆಲಸ ಮಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಮೂರನೆಯದಾಗಿ ನೀವು ಕೊಡುವ ರೋಡ್‌ಗಳನ್ನು ಎರಡು ಮೂರು ವರ್ಷ ಮೆಂಟೇನ್ ಮಾಡಬೇಕು ಎಲ್ಲಾ ಕಂಡೀಷನ್‌ಗೂ ಅವನು ಸಹಿ ಮಾಡಿರುತ್ತಾನೆ, ಆದರು ಅವನು ಕೈ ಎತ್ತಿ ಹೋಗುತ್ತಾನೆ, ಸ್ವಲ್ಪ ಅಮೌಂಟ್ ಅನ್ನು ನೀವು ಡಿಡಕ್ಟ್ ಮಾಡಿರುತ್ತೀರಿ, ಆದರೂ ಸಹ ಎಲ್ಲೂ ಸಹ ಅವರು ಸಮರ್ಪಕವಾಗಿ ಮೆಂಟೇನ್ ಮಾಡುವಂತಹ ಕೆಲಸ ಅವರು ಮಾಡುತ್ತಿಲ್ಲ ಹಾಗಾಗಿ ಈ ಎಲ್ಲ ಸಂಗತಿಗಳ ಕಡೆ ಗಮನವನ್ನು ತಾವು ಕೊಟ್ಟು ಈ ಬಾರಿಯಾದರೂ ಪ್ರತಿ ಪಕ್ಷದ ಶಾಸಕರು ಸೈದ್ಧಾಂತಿಕವಾಗಿ ಹೋರಾಟ ಮಾಡುವುದಕ್ಕೆ... ಅದು ಸಿ.ಆರ್.ಎಫ್. ನಬಾರ್ಡ್, ವಿಶ್ವಬ್ಯಾಂಕ್‌ನಿಂದಾದರೂ ಹೆಚ್ಚು ಹಣವನ್ನು ತಂದು ರಸ್ತೆಗಳ ನಿರ್ವಹಣೆಗೆ ಹೆಚ್ಚು ಗಮನವನ್ನು ತಾವು ಕೊಡಬೇಕು. ತಾವು ತಪ್ಪು ತಿಳಿದುಕೊಳ್ಳದೇ ಹೋದರೆ ರೇವಣ್ಣನವರಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ, ಸಾಧ್ಯವಾದರೆ ತಾವು ನೋಡಿ, ಒಂದೊಂದು ಜಿಲ್ಲೆಗೆ ಪ್ರಾರಂಭಿಕವಾಗಿ ಅನೇಕ ಜನ ನಿವೃತ್ತ ಅಧಿಕಾರಿಗಳನ್ನು, ಅದರಲ್ಲಿ ಪ್ರಾಮಾಣಿಕವಾದ ಬ್ಯಾಂಕ್ ಅಧಿಕಾರಿಗಳು ಇದ್ದಾರೆ, ಅವರ ನೇತೃತ್ವದಲ್ಲಿ ಒಂದು ಉಸ್ತುವಾರಿ ಸಮಿತಿಯೆಂದು ರಚನೆ ಮಾಡಬೇಕು. ರಹಸ್ಯ ವರದಿಯನ್ನು ನೀವು ತರಿಸಿಕೊಂಡು ನೋಡಬೇಕಾಗುತ್ತದೆ. ಕೆಲವರು ಎಸ್ಟಿಮೇಟ್ ಮಾಡಿದ್ದಾರೆ ಉದಾಹರಣೆಗೆ 5,10, 12.00 ಲಕ್ಷ ಅವರ ಸಂತೋಷಕ್ಕೆ ಎಸ್ಟಿಮೇಟ್ ಮಾಡಿಕೊಂಡಿದ್ದಾರೆ. ನ್ಯಾಷನಲ್ ಹೈವೇ ಇಂದ ಹಿಡಿದು ಯಾವುದೇ ಕೆಲಸಕ್ಕಾದರೂ ಅವನಿಗೆ ಮನಸ್ಸು ಬಂದಂತೆ ಎಸ್ಟಿಮೇಟ್ ಮಾಡಿದ್ದಾನೆ. ಇದಕ್ಕೇನಾದರೂ ನಮ್ಮಲ್ಲಿರುವ ಅಧಿಕಾರಿಗಳೇ ಹೋಗಿ ಈ ಕುರಿತು ತನಿಖೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ, ಇದಲ್ಲದೆ ಪ್ರತಿ ಜಿಲ್ಲೆಯಲ್ಲಿಯೂ ಅಲ್ಲಿನ ನಿವೃತ್ತ ಅಧಿಕಾರಿಗಳನ್ನು ಉಸ್ತುವಾರಿಯನ್ನಾಗಿ ಒಂದು ಸಮಿತಿಯಲ್ಲಿ ನೇಮಿಸಿ ರಹಸ್ಯವಾಗಿ ವರದಿಯನ್ನು ತರಿಸಿಕೊಳ್ಳಬೇಕು. ಆದರೆ ಈ ಕೆಲಸಕ್ಕಾಗಿ ಅವರಿಗೆ ನೀವು ಯಾವುದೇ ರೀತಿಯ ಸಂಬಳ ಸಾರಿಗೆ ಏನು ಕೊಡಬೇಕಾಗಿಲ್ಲ, ಅವರೇನು ಕೇಳುವುದಿಲ್ಲ, ಈ ರೀತಿಯಾಗಿ ಒಂದು 4–5 ಸಮಿತಿಯನ್ನು ನೀವು ಜಿಲ್ಲಾವಾರು ಮಾಡಿದರೆ, ನಮಗೆ ಅವಶ್ಯಕತೆ ಎನಿಸಿದಾಗ ನಾವು ಅಲ್ಲಿ ಹೋಗಿ ನೋಡಿಕೊಂಡು ಬರಲಿಕ್ಕೆ ಅನುಕೂಲವಾಗುತ್ತದೆ. ರಹಸ್ಯ ವರದಿ ನೀಡಲಿಕ್ಕೆ ಸಹಾಯವಾಗುತ್ತದೆ, ಒಂದು ವೇಳೆ ನಿಮ್ಮ ಅಧಿಕಾರಿಗಳು ಹೋಗಿ ನೋಡಿಕೊಂಡು ಬಂದರೂ ಸಹ ನಿಮಗೇನು ವರದಿಯು ಬೇಕಾಗುತ್ತದೆ, ಅದನ್ನು ಬರೆದುಕೊಂಡು ಬಂದು ನಿಮಗೆ ನೀಡುತ್ತಾರೆ.

ನೀವು ಹೋಗಿ ಎದುರು ನಿಂತು ಆದೇಶವನ್ನು ಕೊಟ್ಟರೂ ಸಹ ಯಾವುದೇ ಕಾರಣಕ್ಕೂ ಇದು ತಪ್ಪು ಎಂದು ಒಪ್ಪಿಕೊಳ್ಳಲಿಕ್ಕೆ ತಯಾರಿಲ್ಲ, ಅದನ್ನು ಸರಿಪಡಿಸಲಿಕ್ಕೆ ತಯಾರಿಲ್ಲ, ಒಂದು ಕಡೆಯಲ್ಲಿ ಮನೆ ಕಟ್ಟಿದರೆ, ಮತ್ತೊಂದು ಕಡೆಯಿಂದ ಅವೆಲ್ಲ ಬೀಳುತ್ತಾ ಬರುತ್ತವೆ, ಅದೇ ರೀತಿ ರಸ್ತೆಗಳ ಸ್ಥಿತಿಯೂ ಆಗಿದೆ, ಹಿಂದೆ ಎಷ್ಟು ಒಳ್ಳೆಯ ಕ್ವಾಲಿಟಿ, ಸ್ಟಾಂಡರ್ಡ್ ವರ್ಕ್ ಮಾಡುತ್ತಿದ್ದರು, ಇವತ್ತು ಯಾವ ದುಸ್ಥಿತಿ ಬಂದಿದೆ. ಈಗಾಗಲೇ ಮಾರ್ಚ್ ಕೊನೆಯ ಹಂತವಾಗಿದೆ, ಇನ್ನೂ ಏಪ್ರಿಲ್-ಮೇ ಆರಂಭವಾದರೆ ಮಳೆಗಾಲ ಪ್ರಾರಂಭವಾಗುತ್ತದೆ. ಅಷ್ಟರಲ್ಲಿ ಈ ಆಸ್ಫಾಲ್ಟ್ ಕೆಲಸವನ್ನು ಮುಗಿಸಬೇಕು. ಸ್ಯಾಂಕ್ಷನ್ ಕೊಟ್ಟಿರುವಿರಾ? ಈಗ ಆಸ್ಫಾಲ್ಟ್ ಕೊರತೆಯಿಂದ ಬಹುತೇಕ ಈ ರೀತಿ ವರ್ಷದ ಅಂತ್ಯದಲ್ಲಿ ಈ ಆಸ್ಫಾಲ್ಟ್ ಕೆಲಸ ನಿಂತು ಹೋದರೆ ನೀವು ಹೇಗೆ ಆಸ್ಫಾಲ್ಟ್ ಕೆಲಸ ಮಾಡಿಸುತ್ತೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ. ಆಸ್ಫಾಲ್ಟ್‌ನ ಗುಣಮಟ್ಟದ ಬಗ್ಗೆ ಮಾತನಾಡುವುದಾದರೆ, ಸುಮಾರು7,8,10,12,14ಕೋಟಿ ರೂಪಾಯಿಯನ್ನು ಒಂದೊಂದು ಕಿ.ಮೀ.ವರೆಗೂ ಖರ್ಚು ಮಾಡಿ ರಸ್ತೆಗಳ ಡಾಂಬರೀಕರಣ ಮಾಡಿಸಿರುವಿರಿ, ಆದರೆ ಕೇವಲ ಒಂದು ವರ್ಷದಲ್ಲೇ ಆ ರಸ್ತೆಗಳು ಹಾಳಾಗಿ ಗುಂಡಿ ಬಿದ್ದು ಹೋಗಿವೆ. ಎಲ್ಲಾ ಕೊಚ್ಚಿಕೊಂಡು ಹೋಗಿವೆ. ಇಂತಹ ನೂರಾರು ಉದಾಹರಣೆಗಳನ್ನು ನಾನು ನಿಮಗೆ ಕೊಡಬಲ್ಲೆ. ಅದಕ್ಕೋಸ್ಕರ ಈ ಆಸ್ಫಾಲ್ಟ್ ಕ್ವಾಲಿಟಿ ಬಗ್ಗೆ, ಕೆಲಸ ಉತ್ತಮವಾಗಿ ನಡೆಯುವುದರ ಬಗ್ಗೆ, ಮತ್ತೆ ಜಿಲ್ಲಾವಾರು ಉಸ್ತುವಾರಿ ಸಮಿತಿಗಳನ್ನು ರಚಿಸಿ ಎಕ್ಸ್‌ಪರ್ಟ್ಸ್‌ಗಳನ್ನು ನೇಮಕ ಮಾಡಿ, ರಹಸ್ಯವಾಗಿ ಒಂದು ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುವುದರ ಬಗ್ಗೆ ವಿಶೇಷವಾದ ಗಮನವನ್ನು ಕೊಟ್ಟು, ಈ ಭಾಗದಲ್ಲಿ ಕುಳಿತಿರುವ ಶಾಸಕರಿಗೆ ಈಗಾಗಲೇ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ): ನಮ್ಮ ರಾಜ್ಯದಲ್ಲಿಯೂ ಕೂಡ ಅಂತರರಾಷ್ಟ್ರೀಯ ಗುಣಮಟ್ಟದ ರಸ್ತೆಗಳಾಗಬೇಕೆಂಬ ಉದ್ದೇಶದಿಂದ, ವಿಶ್ವಬ್ಯಾಂಕ್‌ನಿಂದ 290 ಕೋಟಿ ರೂ. ಹಾಗೂ 118.00 ಕೋಟಿ ರೂಪಾಯಿಗಳ ನೆರವನ್ನು ಪಡೆದು ಎರಡು ಮಹತ್ವದ ರಸ್ತೆಗಳನ್ನು ಮಾಡಲಿಕ್ಕೆ ಯೋಜನೆಯಿದೆ, ಅವು ಯಾವುವೆಂದರೆ ಒಂದು ರಾಯಚೂರಿನ ಭಾಲ್ಕಿ.... ರಸ್ತೆ, ಮತ್ತೊಂದು ಬಿಜಾಪುರದ ಲೋಕಾಪುರದ ರಸ್ತೆ, ಅದಕ್ಕಾಗಿ ಈ ಕುರಿತು ಮಾತನಾಡಲಿಕ್ಕೆ ನನಗೆ ಒಂದು ನಿಮಿಷ ಅವಕಾಶವನ್ನು ಕೊಡಬೇಕು. ಈಬಗ್ಗೆ ನಾನು ಹತ್ತಾರು ಪತ್ರಗಳನ್ನು ಸರ್ಕಾರಕ್ಕೆ ಹಾಗೂ ಸಚಿವರಿಗೆ ಬರೆದಿರುತ್ತೇನೆ. ಈ ಎರಡೂ

ರಸ್ತೆಗಳ ಅಭಿವೃದ್ಧಿಗೆ ವಿಶ್ವಬ್ಯಾಂಕ್‌ನಿಂದ ಸಾಲವನ್ನು ಪಡೆದು ಕೆಲಸವನ್ನು ಆರಂಭ ಮಾಡಿದ್ದಾರೆ. ಆ ಪ್ಯಾಕೇಜ್ ಸಂಖ್ಯೆ:ಯು.ಎ.7ಎ, ಯು 7ಬಿ, ಹಾಗೂ ಯು 8 ಈ ಮೂರು ಪ್ರಾಜೆಕ್ಟ್ ಗಳನ್ನು ಕರ್ನಾಟಕ ಸ್ಟೇಟ್ ಹೈವೇ ಇಂಪ್ರೂವ್‌ಮೆಂಟ್ ಪ್ರಾಜೆಕ್ಟ್ ಎ.ಸಿ.ಪಿ.ಗೆ. ವಹಿಸಿಕೊಡಲಾಗಿದೆ. ಆದರೆ ಈ ಪ್ಯಾಕೇಜಿನಲ್ಲಿ ಏನಾಗಿದೆಯೆಂದರೆ, ಕೆಲಸವನ್ನು ಮಾಡುವುದು, ಗುಣಮಟ್ಟವನ್ನು ನೋಡುವುದು ಹಾಗೂ ಬಿಲ್ ಅನ್ನು ಬರೆಯುವುದೂ ಕೂಡ ಕಂಟ್ರಾಕ್ಟರ್ ಒಬ್ಬರೇ ಮಾಡುತ್ತಾರೆ, ಇಲಾಖಾಧಿಕಾರಿಗಳಿಗೆ ಇಲ್ಲಿ ಏನೂ ಅಧಿಕಾರವಿಲ್ಲ, ಹೀಗಾಗಿ ಕಂಟ್ರಾಕ್ಟರ್ ಏನು ಮಾಡುತ್ತಾರೆ ಅದೇ ಫೈನಲ್ ಇವತ್ತು ಓವರ್ ಸೈಜ್ ಮೆಟಲ್ ಯೂಸ್ ಮಾಡುತ್ತಿದ್ದಾರೆ. ಮೋರಮ್ ಕ್ವಾಲಿಟಿ ಸರಿಯಾಗಿಲ್ಲ. ಕನ್‌ಸಾಲಿಡೇಷನ್ ಸರಿಯಾಗಿಲ್ಲ, ವಾಟರಿಂಗ್ ಸರಿಯಾಗಿಲ್ಲ, ಇವತ್ತು ಸಿ.ಡಿ. ವರ್ಕ್ ಬ್ರಿಡ್ಜಸ್‌ಗಳನ್ನು ಕಟ್ಟಲು ಉಪಯೋಗಿಸಿರುವ ಸೈಜ್ ಕಲ್ಲುಗಳು ಸರಿಯಾಗಿಲ್ಲ, ಆಮೇಲೆ ಕ್ಯೂರಿಂಗ್ ಆಗಿಲ್ಲ, ತಾವು ನೋಡಿದರೆ ಒಂದು ಕಲ್ಲನ್ನು ಬಿಚ್ಚಿ ನೋಡಿದರೆ ಬಳ ಬಳ ಸಿಮೆಂಟ್ ಮಾರ್ಟರ್ ಉದುರುತ್ತದೆ. ಒಳಗೆ ಕೈ ಹಾಕಿ ನೋಡಬಹುದು, ಆ ರೀತಿಯಾಗಿ ಕಟ್ಟಿದ್ದಾರೆ, ಇದನ್ನು ನಾನು ಸ್ವತಃ ಅಬ್ಸರ್ವ್ ಮಾಡಿಲ್ಲ. ಎ.ಸಿ.ಪಿ. ಎಕ್ಸಿಕ್ಯುಟೀವ್ ಇಂಜಿನಿಯರ್ ಬೆಳಗಾಂ ಡಿವಿಷನ್, ಮುಧೋಳ್‌ನ ಅಸಿಸ್ಟೆಂಟ್ ಇಂಜಿನಿಯರ್ ಇಲ್ಲರೂ ಹೋಗಿ ನೋಡಿ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಇನ್ಸ್‌ಪೆಕ್ಷನ್‌ಗೆ ನೋಟ್ ಕಳುಹಿಸಿದ್ದೇವೆ. ಆದರೂ ಕೂಡ ಗುಣಮಟ್ಟ ಸುಧಾರಣೆಯಾಗುತ್ತಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ, ಇವತ್ತು ಪ್ರತಿ ಒಂದು ಕಿ.ಮೀ.ಗೆ 1.20 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರೂ ಸಹ ರಸ್ತೆಗಳ ಗುಣಮಟ್ಟ ಈ ರೀತಿಯಾದರೆ ವಿಶ್ವಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿರುವುದು ಯಾರ ಉಪಯೋಗಕ್ಕಾಗಿ ಎಂದು ನಮಗೆ ಅರ್ಥವಾಗುತ್ತಿಲ್ಲ. ಇವತ್ತು ಹಣ ನೀಡಿರುವುದು ಕಂಟ್ರಾಕ್ಟರ್ ಮನೆಗೆ ತೆಗೆದುಕೊಂಡು ತನಿಖಾದಳವನ್ನಾಗಲಿ, ವಿಜಿಲೆನ್ಸ್ ಸ್ಕ್ವಾಡ್‌ನ್ನಾದರೂ ಕಳುಹಿಸಲಿ, ಇಲ್ಲವೇ ಯಾರಾದರೂ ಒಬ್ಬರು ಸ್ಟ್ರಿಕ್ಟ್ ಆಗಿರುವ ಅಧಿಕಾರಿಯನ್ನು ಕಳುಹಿಸಿ ಇನ್ಸ್‌ಪೆಕ್ಷನ್ ಮಾಡಿಸಿ, ಸರ್ಕಾರ ವರದಿ ತರಿಸಿ ನಮಗೆ ತಿಳಿಸಿದರೆ ಉತ್ತಮವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಸಾಹೇಬರು, ಶ್ರೀ ವಿಶ್ವೇಶ್ವರ ಹೆಗಡೆಯವರು ಮತ್ತು ಗೋವಿಂದ ಕಾರ್‌ಜೋಳರವರು, ಟೆಂಡರ್ ಕರೆದಿರುವುದರಲ್ಲಿ ಸುಮಾರು 45 ಟೆಂಡರುಗಳನ್ನು ಪ್ಯಾಕೇಜ್ ಸಿಸ್ಟಂನಲ್ಲಿ ಹಿಂದೆ ವರ್ಲ್ಡ್‌ಬ್ಯಾಂಕ್ ನಾರಮ್ಸ್ ಪ್ರಕಾರ ಕರೆದಿತ್ತು. ಅದು ಸುಮಾರು 1,826

ಕೋಟಿ ರೂಪಾಯಿ ಎಸ್ಟಿಮೇಟ್ ಕಾಸ್ಟ್. ಆದರೆ ನಾವು ಕೊಟ್ಟಿರುವುದು 1,650 ಕೋಟಿ ರೂಪಾಯಿ ಇದರಲ್ಲಿ ಕೆಲವು ಪ್ಯಾಕೇಜ್‌ನಲ್ಲಿ ಲೋಯೆಸ್ಟ್ ಬಂದಿದೆಯೇ ಹೊರತು, ಹೈಯೆಸ್ಟ್ ಯಾವುದೂ ಕೊಟ್ಟಿಲ್ಲ. ಪ್ಯಾಕೇಜ್ 1 ರಿಂದ 45ರವರೆಗೆ, ಉದಾಹರಣೆಗೆ ಹೇಳುವುದಾದರೆ ಒಂದನೇ ಪ್ಯಾಕೇಜ್ 82 ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ಕಾಸ್ಟ್ ಆಗಿತ್ತು, 67 ಕೋಟಿ ರೂಪಾಯಿಗಳಿಗೆ ಟೆಂಡರ್ ಆಗಿದೆ. ಇದೇ ರೀತಿ ಮಾನ್ಯ ವಿಶ್ವೇಶ್ವರ ಹೆಗಡೆಯವರು ಒಂದೆರಡು ಪ್ಯಾಕೇಜ್ ಉದಾಹರಣೆಗೆ ಕೊಟ್ಟಿದ್ದಾರೆ. ಎಂ–25, ಅದು 24 ಕೋಟಿ ಎಸ್ಟಿಮೇಟ್ ಕಾಸ್ಟ್ ಇತ್ತು ಹದಿನೇಳುವರೆ ಕೋಟಿಗೆ ಟೆಂಡರ್ ಆಗಿದೆ. ಅದೇ ರೀತಿ ಎಂ–26, 23 ಕೋಟಿಗೆ ಆಗಿತ್ತು, 17 ಕೋಟಿಗೆ ಪ್ಯಾಕೇಜ್ ಕೊಟ್ಟಿರುವುದು. ಎಂ–27, 22 ಕೋಟಿಗೆ ಆಗಿತ್ತು, 17 ಕೋಟಿಗೆ ಕೊಟ್ಟಿದ್ದಾರೆ. ಎಂ–28 ಇದನ್ನು ಆದಷ್ಟು 10 ರಿಂದ 15–20 ಪರ್ಸೆಂಟ್ ಕಡಿಮೆಯಲ್ಲೇ ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಶ್ರೀರಂಗಪಟ್ಟಣ–ಬೀದರ್ ರಸ್ತೆ ಇದೆ. ಕಂಟ್ರಾಕ್ಟರುಗಳು ಲಾಸ್ ಆಗುತ್ತೆ ಎಂದು ಬಿಟ್ಟುಹೋಗಿದ್ದಾರೆ, ಅವರಿಗೆ ನಾವು ಹಣ ನಿಲ್ಲಿಸಿದ್ದೇವೆ. ನಾವು ಅವರ ಹತ್ತಿರ ಯಾವ ದಾಕ್ಷಿಣ್ಯ ಇಟ್ಟುಕೊಂಡಿಲ್ಲ. ಸಕಾಲದಲ್ಲಿ ಯಾರು ಮಾಡಿಲ್ಲ, ಅವರಿಗೆ ಪೆನಾಲ್ಟಿಯನ್ನು ಕಾಲಕಾಲಕ್ಕೆ ಸರಿಯಾಗಿ ಹಾಕುತ್ತಿದ್ದೇವೆ. ಒಂದು ಪೀಸನ್ನು ಕ್ಯಾನ್ಸಲ್ ಮಾಡಿದ್ದರೆ, ಕ್ಯಾನ್ಸಲ್ ಮಾಡಿದ ಮೇಲೆ ಅವನು ಕೋರ್ಟಿಗೆ ಹೋಗಿದ್ದ. ವ್ಯವಸ್ಥಾಪಕ ನಿರ್ದೇಶಕರು ಮುಖ್ಯ ಕಾರ್ಯದರ್ಶಿಯವರ ಹಿಡಿತದಲ್ಲಿರುತ್ತಾರೆ. ಅವರು ಯಾರು ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಈ ಕೆಲಸಗಳ ಉಸ್ತುವಾರಿ ನಡೆಯುತ್ತದೆ. ಅವರು 30ನೇ ತಾರೀಖು ಕಳುಹಿಸಿ ಕೊಟ್ಟರು, ಅವತ್ತೇ ನಾನು ಸಹಿ ಹಾಕಿ ಮುಖ್ಯಮಂತ್ರಿಗಳಿಗೆ ಕ್ಯಾನ್ಸಲೇಷನ್‌ಗೆ ಕಳುಹಿಸಿದ್ದೇನೆ. ಕ್ಯಾನ್ಸಲೇಷನ್ ಮಾಡಬೇಕಾದರೂ ಕೆಲವು ಕಾನೂನು, ವಿಧಾನಗಳು ಇವೆ. ಏಕೆಂದರೆ ವರ್ಲ್ಡ್ ಬ್ಯಾಂಕ್ ನಾರಮ್ಸ್ ಪ್ರಕಾರ ಕಂಟ್ರಾಕ್ಟ್ ಕೊಟ್ಟಿರುವುದು. ಒಂದೇ ಸಾರಿ ಏಕದಮ್ ನಾವು ಯಾರನ್ನೂ ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ. ಕ್ಯಾನ್ಸಲ್ ಮಾಡಿದ ತಕ್ಷಣ ಅವರು ಕೋರ್ಟ್‌ಗೆ ಹೋಗುತ್ತಾರೆ. ಅವರಿಗೆ ಪೆನಾಲ್ಟಿಯನ್ನು ಹಾಕಿ, ಕ್ಯಾನ್ಸಲೇಷನ್ ಗೆ ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಯಾವ ಕಂಟ್ರಾಕ್ಟರ್ ಹಾಕಿಸಿಕೊಂಡಿದ್ದಾನೆ.....

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮುಖ್ಯಮಂತ್ರಿಗಳ ಮೇಲೆ ಯಾವ ಒತ್ತಡ ತರಬೇಕೋ ಅದನ್ನು ತರುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಮುಖ್ಯಮಂತ್ರಿಗಳೂ ಕೂಡ ಯಾವ ಒತ್ತಡಕ್ಕೂ

ಯೀಲ್ಡ್ ಆಗಿಲ್ಲ. ಅದರ ಬಗ್ಗೆ ನೀವು ಯಾವ ಅನುಮಾನಪಡಬೇಕಾಗಿಲ್ಲ. ಕಾನೂನು ರೀತಿ, ತಮ್ಮ ರಸ್ತೆಯನ್ನು ಸುಗಮವಾಗಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಆದರೆ, ಕೆಲವು ಕಂಟ್ರಾಕ್ಟರುಗಳು ಕ್ಯಾನ್ಸಲೇಷನ್ ಮಾಡತಕ್ಕ ಸಂದರ್ಭದಲ್ಲಿ ಕೆಲವು ಮಾರ್ಗಸೂಚಿ ಇರುತ್ತೆ. ಅದರಂತೆ ಮಾಡಬೇಕಾಗುತ್ತದೆ. ಸುಮ್ಮಸುಮ್ಮನೇ ಕಂಟ್ರಾಕ್ಟ್ ಕ್ಯಾನ್ಸಲ್ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ, ಇಲಾಖೆಯಿಂದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದಂತಹ ಸಮಿತಿ ಕೊಟ್ಟ ವರದಿಯನ್ನು ಕ್ಯಾನ್ಸಲೇಷನ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅದನ್ನು ಮಾಡುತ್ತೇವೆ. ಬಾಕಿ ಉಳಿಕೆಯದೇನಿದೆ, ಅದನ್ನು ಸಕಾಲದಲ್ಲಿ ಮಾಡದೇ ಹೋದರೆ, ಅದು ಯಾರದೇ ಆಗಲೀ ಅವರಿಗೆ ಪೆನಾಲ್ಟಿಯನ್ನೂ ಹಾಕುತ್ತೇವೆ ಅಥವಾ ಕ್ಯಾನ್ಸಲೇಷನ್ ಮಾಡುವುದಿದ್ದರೂ ಮಾಡುತ್ತೇವೆ. ಇಷ್ಟನ್ನು ಕೇಸಿನ ಬಗ್ಗೆ ಹೇಳುತ್ತೇನೆ. ಹೊಸ ಕೆಲಸಗಳನ್ನು ನಾನು ಬಂದ ಮೇಲೆ ತೆಗೆದುಕೊಂಡಿಲ್ಲ. ಎರಡು ವರ್ಷದ ಹಿಂದೆಯೇ 45 ಪ್ಯಾಕೇಜ್ ಆಗಿತ್ತು. ಮತ್ತೆ ಈಗ ಮೂರು ಸಾವಿರ ಕಿಲೋ ಮೀಟರ್ ತೆಗೆದುಕೊಳ್ಳಬೇಕೆಂಬ ಉದ್ದೇಶ ಇದೆ. ಅದರಿಂದ, ಮಾರ್ಗಸೂಚಿ ಪ್ರಕಾರ ನಮ್ಮ ಕೇಷಿಪ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರು ಒಂದು ಪ್ರಾಜೆಕ್ಟ್ ರಿಪೋರ್ಟ್ ರೆಡಿ ಮಾಡಿದ್ದಾರೆ. ಇದನ್ನು ಮುಂದಿನ ಸಚಿವ ಸಂಪುಟದ ಸಭೆಗೆ ತರುತ್ತೇವೆ. ನಮ್ಮ ರಾಜ್ಯದಲ್ಲಿ 55 ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆ ಸರಿಯಾಗಿಲ್ಲವೆಂಬ ವರದಿ ಇದೆ. ಏಕೆಂದರೆ ನಾವು ಇದನ್ನು ಮುಚ್ಚುಮರೆಯಲ್ಲಿ ಇಡಬೇಕಾದ ಪರಿಸ್ಥಿತಿ ಏನಿಲ್ಲ. ಅದರ ಆಧಾರದ ಮೇಲೆ, ಮತ್ತು ಯಾವ ಯಾವ ಸಂಪರ್ಕ ಮಾಡಬೇಕು, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಇರಬಹುದು ಅಥವಾ ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಇರಬಹುದು ಈ ರಸ್ತೆಗಳ ಮಾರ್ಗಸೂಚಿಯನ್ನು ಇಟ್ಟುಕೊಂಡು ಮತ್ತು ಜನಪ್ರತಿನಿಧಿಗಳ ಅಭಿಪ್ರಾಯವನ್ನು ತೆಗೆದುಕೊಂಡು ಮುಂದೆ ಮಾಡತಕ್ಕ ಮೂರು ಸಾವಿರ ಕಿಲೋಮೀಟರ್ ರಸ್ತೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇವೆ. ಎರಡನೆಯದು, 200 ಕೋಟಿ ರೂಪಾಯಿಗಳನ್ನು ಸೇತುವೆಗಳಿಗಾಗಿ 84 ಸೇತುವೆಗಳನ್ನು ಬಿ.ಜೆ.ಪಿ. ಶಾಸಕರಿಗೆ ಕೊಟ್ಟಿದ್ದೇವೆ. ಯಾವ ತಾಲ್ಲೂಕಿಗೂ ಕೊಟ್ಟಿಲ್ಲ. ಬೇಕಾದರೆ ತಾವು ನೋಡಿ. ಕೆಲವು ಕಡೆ 4 ಕೋಟಿ ಆಗುತ್ತೆ, ಕೆಲವು ಕಡೆ 50 ಲಕ್ಷ ಆಗುತ್ತೆ. ಆ ಪಕ್ಷ ಈ ಪಕ್ಷ ಎಂದು ನಾನು ಮಾಡಿಲ್ಲ. ಎಲ್ಲಾ ಪಾರ್ಟಿಯವರಲ್ಲೂ ಈ ಒಂದು ಅಭಿಪ್ರಾಯ ಇದೆ. ಬೆಳಗಾಂನಲ್ಲಿ ಒಂದು ಕಡೆ ಶಾಸಕರಿಗೆ ಕೊಟ್ಟಿದ್ದೇವೆ, ಅದು ನಾಲ್ಕುವರೆ ಕೋಟಿ ಕೊಟ್ಟಿದ್ದೇವೆ. ಅಲ್ಲಿ ನಮ್ಮ ಪಾರ್ಟಿಯವರಿಗೆ ಕೊಟ್ಟೇ ಇಲ್ಲವೆನ್ನುತ್ತಾರೆ. ನಮಗೇನೆಂದರೆ, ಎಲ್ಲಿ ಕಾರ್ಯಪಾಲಕ ಅಭಿಯಂತರು ಮತ್ತು

ಜನಪ್ರತಿನಿಧಿಗಳಿಂದ ಬಂದಂಥ ವರದಿ ಆಧಾರದ ಮೇಲೆ ಈ 386 ಸೇತುವೆಗಳನ್ನು ಮಂಜೂರಾತಿ ಮಾಡಿದ್ದೇನೆಯೇ ಹೊರತು ನನ್ನ ಪರ್ಸನಲ್ ಇಂಟ್ರೆಸ್ಟ್‌ನಲ್ಲಿ ಯಾವುದೂ ಮಾಡಿಲ್ಲ. ಬೇಕಾದರೆ, ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲಿ ಬರೀ 30 ಲಕ್ಷ ರೂಪಾಯಿ ಬ್ರಿಡ್ಜ್ ತೆಗೆದುಕೊಂಡಿದ್ದೇವೆ. ನಿಮ್ಮ ಭಾಗದಲ್ಲಿ ಬಂದ ಹಾಗೆ ನಮ್ಮಲ್ಲಿ ಬ್ರಿಡ್ಜ್ ಬರುವುದಿಲ್ಲ. ನಾವು ತೆಗೆದುಕೊಂಡಿಲ್ಲ. ಈ ಉದ್ದೇಶದಿಂದ 200 ಕೋಟಿ ಸೇತುವೆಗಳಿಗೆ ಇಟ್ಟಿದ್ದೇವೆ. ಬೇಕಾದರೆ, ನೀವು ತೆಗೆದು ನೋಡಿ. ತಾಲ್ಲೂಕುವಾರು ವಿವರಗಳನ್ನು ನಿನ್ನೆ ಯಡಿಯೂರಪ್ಪನವರಿಗೆ ಮತ್ತು ಈಶ್ವರಪ್ಪನವರಿಗೆ ತೋರಿಸಿದ್ದೇನೆ. ಈ 366 ಸೇತುವೆಗಳಲ್ಲಿ 86 ಸೇತುವೆಗಳನ್ನು ಬಿ.ಜೆ.ಪಿ. ಶಾಸಕರಿಗೆ ಕೊಟ್ಟಿದ್ದೇವೆ. ಅದಲ್ಲದೆ, ನಬಾರ್ಡ್ ರಸ್ತೆಗಳನ್ನು ತೆಗೆದುಕೊಳ್ಳುವುದು. ಶಿವಮೊಗ್ಗ ಜಿಲ್ಲೆಯಲ್ಲಿ ನಬಾರ್ಡ್ ರಸ್ತೆಗಳನ್ನು ಎಲ್ಲೆಲ್ಲಿ ತೆಗೆದುಕೊಂಡಿದ್ದೇವೆಂಬುದನ್ನು ನೋಡಿದ್ದೇನೆ. ಮೊದಲ ಬಾರಿಗೆ 275 ಕೋಟಿ ರೂಪಾಯಿಗಳನ್ನು ನಬಾರ್ಡ್ ರಸ್ತೆಗಾಗಿ ತೆಗೆದುಕೊಂಡಿದ್ದೇವೆ. ಚರಿತ್ರೆಯಲ್ಲಿ ಯಾರೂ ಇಷ್ಟು ನಬಾರ್ಡ್ ರಸ್ತೆಗಳನ್ನು ತೆಗೆದುಕೊಂಡಿಲ್ಲ. ನಾವು ಈಗಾಗಲೇ ಅದರಲ್ಲಿ ಮೊದಲ ಹಂತ ಮತ್ತು ಎರಡನೇ ಹಂತಕ್ಕೆ ಸಂಬಂಧಪಟ್ಟ ನಬಾರ್ಡ್ ಆಫೀಸಿನಿಂದ ಮಂಜೂರಾತಿಯನ್ನು ತರಿಸಿದ್ದೇನೆ. ಕೆಲವು ಕಡೆ ತಂಡವನ್ನೂ ಕರೆಸಿದ್ದೇನೆ. ಈ ನಬಾರ್ಡ್ ರಸ್ತೆಗಳನ್ನು ಕೊಟ್ಟಿದ್ದೇವೆಂಬುದನ್ನು ತಮಗೆ ಬೇಕಾದರೆ ತಿಳಿಸುತ್ತೇನೆ. ನಬಾರ್ಡ್‌ನಲ್ಲಿ ಒಂದು ಕಮಿಟಿ ಇದೆ. ಖಿರ್ಗೆ ಸಾಹೇಬರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಇದೆ. ಅದರಲ್ಲಿ 5 ಜನ ಮಿನಿಸ್ಟರು ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಶಿವಮೊಗ್ಗ ಜಿಲ್ಲೆಯಲ್ಲಿ, ನಮ್ಮ ಪಕ್ಷದ ವತಿಯಿಂದ ಪ್ರತಿನಿಧಿಸಿದ ಶಾಸಕರಿಗಿಂತ ಬೇರೆ ಪಕ್ಷದ ಶಾಸಕರಿಗೆ ಜಾಸ್ತಿ ಕೊಟ್ಟಿದ್ದೇನೆ. ಡಾಕ್ಯುಮೆಂಟ್ಸ್ ತೆಗೆಸಿ ನೋಡಿದರೆ ತಮಗೇ ಗೊತ್ತಾಗುತ್ತದೆ. ನಮಗೇನು ಆ ತರಹ ಇಲ್ಲ. ಕೆಲವು ಸನ್ನಿವೇಶಕ್ಕೆ ನಾವು ಕೊಡಬೇಕಾಗುತ್ತೆ. ಮಾನ್ಯ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ ಸಾಹೇಬರು ಇದ್ದಾರೆ. ಮಾನ್ಯ ಮಾಧುಸ್ವಾಮಿಯವರು ಇದ್ದಾರೆ. ಉದಾಹರಣೆಗೆ ಹೇಳುವುದಾದರೆ, ಮಾನ್ಯ ಜಗದೀಶ್ ಶೆಟ್ಟರ್ ವ್ಯಾಪ್ತಿಗೆ ಬರುವ ಒಂದು ರಸ್ತೆ ಇತ್ತು. ಅದು ಹುಬ್ಬಳ್ಳಿಗೆ ಹೋಗುವ ರಸ್ತೆ 3 ಕೋಟಿ ರೂಪಾಯಿಗಳಿಗೆ ಅದನ್ನು ತೆಗೆದು ಕೊಂಡಿದ್ದೇನೆ. ಈಶ್ವರಪ್ಪನವರ ರಸ್ತೆಯೂ ಇತ್ತು, ಅದನ್ನು ಮೂರುವರೆ ಕೋಟಿಗೆ ತೆಗೆದುಕೊಂಡಿದ್ದೇನೆ. ಏಕೆಂದರೆ ಶಿವಮೊಗ್ಗ ಬೈಪಾಸ್ ಇತ್ತು. ಹುಬ್ಬಳ್ಳಿಗೆ ಬೈಪಾಸ್ 21 ಕಿ.ಮೀ. ಮೂರುವರೆ ಕೋಟಿ ತೆಗೆದುಕೊಂಡಿದ್ದೇವೆ. ಬೆಳಗಾಂನಲ್ಲಿ ತೆಗೆದುಕೊಂಡಿದ್ದೇವೆ. ಇದೇ ತರಹ ಹಂಪೆಯಲ್ಲಿ ಟೂರಿಸ್ಟ್ ಸ್ಥಳವೆಂದು ತೆಗೆದು ಕೊಂಡಿದ್ದೇವೆ. ಬೇರೆ ಉದ್ದೇಶದಿಂದ ಯಾವುದನ್ನೂ ತೆಗೆದುಕೊಂಡಿಲ್ಲ. ನಾವು ಈ ರೀತಿ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಕಳೆದ 5 ವರ್ಷಗಳಲ್ಲಿ

ಸಿ.ಆರ್. ಎಫ್ ನಲ್ಲಿ ಯಾವ ಶಾಸಕರಿಗೆ ಅನ್ಯಾಯವಾಗಿದೆ, ಅದರ ಬಗ್ಗೆಯೂ ಒಂದು ಪಟ್ಟಿಯನ್ನು ತರಿಸಿದ್ದೇವೆ. ಇದರ ವಿವರಗಳನ್ನೂ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅದರ ಪ್ರಕಾರ ನಾನೇನು ಮಾಡಿದ್ದೇನೆಂದರೆ, ಮತ್ತೆ 120 ಕ್ಷೇತ್ರಗಳಿಗೆ ಕೇಂದ್ರ ಸರ್ಕಾರಕ್ಕೆ 40–40 ಲಕ್ಷದಂತೆ ಕಳುಹಿಸಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈಗಾಗಲೇ ಮೂರು ತಿಂಗಳಾಗಿದೆ, ಇನ್ನೂ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಬಂದ ತಕ್ಷಣ ನಾನು ಮಾಡಿಸಿ ಕೊಡುತ್ತೇನೆ. ನನಗೇನು ಅವರದು, ಇವರದು ಎನ್ನುವ ಪ್ರಶ್ನೆ ಇಲ್ಲ ಅದರ ಜೊತೆಗೆ 30–54ರಲ್ಲಿ ಸಾಕಷ್ಟು ಕಡೆಗಳಲ್ಲಿ ಕೊಟ್ಟಿದ್ದೇವೆ. ಎಲ್ಲಾದರೂ ಕೊಟ್ಟಿಲ್ಲದೇ ಹೋದರೆ, ಸರಿಪಡಿಸುವುದಕ್ಕೆ ನಾನು ತಯಾರಿದ್ದೇನೆ. ಇದರ ಒಂದು ಪಟ್ಟಿಯನ್ನು ತಯಾರು ಮಾಡಿ ಎಂದು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಎಲ್ಲಾ ಕ್ಷೇತ್ರಗಳಿಗೂ ಒಂದೇ ಸಾರಿ ಕೊಡುವುದಕ್ಕಾಗುವುದಿಲ್ಲ. ಹಣಕಾಸಿನ ಲಭ್ಯತೆ ಆಧಾರದ ಮೇಲೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ಇದರ ಜೊತೆಗೆ ಕ್ವಾಲಿಟಿ ವರ್ಕ್ಸ್ ಬಗ್ಗೆ ವಿರೋಧ ಪಕ್ಷದ ಉಪನಾಯಕರಾದ ಕಾರಜೋಳರವರು ಪ್ರಸ್ತಾಪ ಮಾಡಿ, ಕೆಲವು ಕಡೆ ಕ್ವಾಲಿಟಿ ವರ್ಕ್ಸ್ ಸರಿಯಿಲ್ಲವೆಂದು ಹೇಳಿದರು. ಇದು ನನ್ನ ಗಮನಕ್ಕೆ ಬಂದರೆ, ಯಾವ ತರಹ ತನಿಖೆ ಮಾಡಿಸುವುದಕ್ಕೂ ನಾನು ಸಿದ್ಧನಿದ್ದೇನೆ. ನನಗೆ ಯಾರ ಹತ್ತಿರ ಯಾವುದೇ ದಾಕ್ಷಿಣ್ಯ ಇಲ್ಲ. ಖಾಸಗಿ ಕಂಟ್ರಾಕ್ಟರ್ ಆಗಲೀ ಅಥವಾ ಯಾವುದಾದರೂ ಫಾಲ್ಸ್ ಬಿಲ್ ಅಥವಾ ಕ್ವಾಲಿಟಿ ವರ್ಕ್ಸ್ ಇಲ್ಲದೇ ಇದ್ದರೆ, ಅದರ ಬಗ್ಗೆ ತಾವು ಮಾಹಿತಿ ಕೊಟ್ಟರೆ ನಮ್ಮ ಹಿರಿಯ ಅಧಿಕಾರಿಗಳಿಗೆ ಹೇಳಿ, ತನಿಖೆ ಮಾಡಿಸುವುದಕ್ಕೂ ಸಿದ್ಧನಿದ್ದೇನೆಂದು ತಿಳಿಸಿ, ಬಾಕಿ ಕ್ಷೇತ್ರಗಳಲ್ಲಿ ಏನಾದರೂ ಸಣ್ಣಪುಟ್ಟ ರೋಡುಗಳಿದ್ದರೆ, ನಾನು ಮಾಡಿಸಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ವಿಷಯ:ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ ಹಾಗೂ ಕಾಖಾನೆಯ ಜಮೀನನ್ನು ಖಾಸಗಿಯವರಿಗೆ ವಹಿಸುವುದರಿಂದ, ಅಲ್ಲಿನ ನೌಕರರಿಗೆ ಉಂಟಾಗುವ ತೊಂದರೆ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ ಏನಿದೆ, ಆ ಗಂಧದ ಎಣ್ಣೆ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಬೇಕು ಮತ್ತು ಅಲ್ಲಿರುವ ಜಮೀನನ್ನು ಪರಭಾರೆ ಮಾಡಬೇಕೆಂದು ಸರ್ಕಾರದ ಚಿಂತನೆ ಏನಿದೆ. ಅದರಿಂದ ಅಲ್ಲಿ ಉಂಟಾಗುವ ಅನಾನುಕೂಲತೆಗಳ ಬಗ್ಗೆ ಸನ್ಮಾನ್ಯ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):–